ಶ್ರೀರಸ್ತು

ಅರಮನೆ ಮುಜರಾಯಿ ಭಕ್ಷೀರು

ಹೆಚ್. ಲಿಂಗರಾಜೇಅರಸಿನವರಿಂದ.

ನೂತನವಾಗಿ ರಚಿಸಲ್ಪಟ್ಟ

ಕರ್ಣಾಟಕ

ರಾಮಾಯಣ ಸಂಗ್ರಹದ

ಅರಣ್ಯಕಾಂಡವು

ಮೈಸೂರು

ಆಸ್ಥಾನ ಮಹಾವಿದ್ವಾನ್

ಪಿ. ಆರ್. ಕರಿಬಸವಶಾಸ್ತ್ರಿಗಳಿಂದ

ಪರಿಶೋಧಿಸಲ್ಪಟ್ಟ

ಮೈಸೂರು:

ಶ್ರೀನಿವಾಸ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

1917

PRINTED BY

S. ÑANJUÑDA SASTRY

AT THE SREEÑIVASA PRESS, MYSORE.

ಓಂ

ಶ್ರೀಗುರುದಕ್ಷಿಣಾಮೂರ್ತಯೇ ನಮಃ.

ಕನ್ನಡ

ರಾಮಾಯಣ ಸಂಗ್ರಹವು.

ಅರಣ್ಯಕಾಂಡವು.

ಸೂಚನೆ|| ತೆರಳುವೆಡೆಯೊಳಗರಿವಿರಾಧನ |
ತರಿದುನೇಹದೊಳಾಜಟಾಯುವ |
ಬೆರೆದು ರಾಮನು ಪಂಚವಟಿಯನು ಸಾರ್ದನೊಲವಿನಲಿ ||

ತೆರಳಿದರು ವರಚಿತ್ರಕೂಟದ |
ಗಿರಿಯಿನಾ ರಾಘವರು ಜತೆಯಲಿ |
ಧರಣಿಜಾತೆಯುಮೈದೆ ಮೆರೆವಾ ದಂಡಕಾವನಕೆ ||
ಪರಿಪರಿಯ ತರು ಗುಲ್ಮಲತೆಗಳ |
ನೆರವಿಯಿಂ ನಾನಾ ವಿನೋದದೆ |
ಚರಿಸುತಿಹ ಮೃಗಪಕ್ಷಿ ನಿಕರದಿನೆಸೆದುದಾಬನವು ||೧||

ಅಂದು ಭಗವನ್ನಾಮ ಕೀರ್ತನ ।
ದಿಂದ ಕಾಲವ ಕಳೆವ ಮುನಿಜನ ।
ವೃಂದ ಕಂಡುದು ಬಂದುದಿವರಾರೆನುತ ಮುಸುಕಿದುದು ॥
ಸುಂದರಾಂಗರ ನೋಡೆ ಬಾಹುಜ ।
ರಂದದಿಂ ತೋರುವರು ಕೇಳುವೆ ।
ವೆಂದು ಕೈಗಳಮುಗಿದು ನುಡಿಸಿದರಂದು ರಾಘವನ ॥೧॥

ರಾಯ ನೀನಾರಡವಿಪರಿಯಂ ।
ತಾಯಸವು ನಿನಗೇಕೆ ತಾನೀ ।
ತೋಯಜಾಕ್ಷಿಯದಾರು ನಿನಗೀ ಸುಮುಖನೇನಹನು ॥
ಆಯಿತಿಲ್ಲಿಗೆ ಬರವದೇಕಿದ ।
ರಾಯತವ ನಮಗರುಹಬೇಕೆನು ।
ತಾ ಯಮೀಂದ್ರರು ನುಡಿಸಲೆಂದನು ರಾಮನನುಸಯದೆ ॥೨॥

ಕೇಳಿರೈ ಋಷಿಗಳಿರ ನೃಪಜನ ।
ವ್ರಾಳಿ ದಶರಥನೆನ್ನ ಜನಕನು ।
ತಾಳಿಹೆನು ನೇಮವನು ಪದಿನಾಲ್ಕಬುದ ಮಡವಿಯಲಿ ॥
ಕಾಲ ಕಳೆಯುವೆನೆನುತ ತನಗೀ ।
ಲೋಲಲೋಚನೆಯುರಸಿತಾನತಿ ।
ಶೀಲವತಿಯೆನ್ನೊಡನೆ ಬಂದಳು ಯುವತಿ ವಿಮಲಮತಿ ॥೩॥

ರಾಮನೆಂದಪರೆನ್ನನೀತಂ ।
ಪ್ರೇಮಸೋದರ ಲಕ್ಷ್ಮಣನು ಮೇ ।
ಸ್ವಾಮಿನಿಯುನೀಕೆಯನು ಕರೆವರು ಸೀತೆಯೆಂದೆನುತೆ ॥
ಈಮಹಾವನದೊಳು ತಪೋಜಪ ।
ಹೋಮಗಳ ನೆಸಗುತ್ತಮೆಂದುಂ ।
ಕ್ಷೇಮದಿಂದಿಹಿರೇನು ಬೆಸಸುವುದೆಂದನಾ ನೃಪತಿ ॥೫॥

ಕ್ಷಮಿಸುವುದು ಸರ್ವಾಪರಾಧವ ।
ನಮಿಸುವೆವು ನಿನಗಿಂದು ರಾಘವ ।
ಕುಮತಿಗಳಗೆಮಗೆಲ್ಲಿ ಗೋಚರ ವಹುದು ತವಪದವು ।
ಅಮಿತತೋಷಿಗಳಾದೆವೀದಿನ ।
ಮಮತೆದೋರುತ್ತೆಮ್ಮ ಪುಣ್ಯಾ ।
ಶ್ರಮಕೆ ಬಿಜಯಂಗೈದು ಸತ್ಕಾರವನು ಕೊಂಬುವುದು ॥೬॥

ಎನುತ ಕರೆದೊಯ್ಯುತ್ತ ಲವರನು ।
ಘನಮನೋಹರ ಪರ್ಣಮಂದಿರ ।
ಕನುವಿನಿಂದರ್ಘ್ಯಾದಿ ಸತ್ಕಾರಗಳ ನಂದೆಸಗಿ ॥
ವನದೆ ದೊರೆವಾ ಕಂದಮೂಲವ ।
ವಿನಯದಿಂದಾಹಾರಕೀಯು ।
ತ್ತನುಪಮನನತಿವರುಪಚರಿಸಿದರುಭಕ್ತಿಭಾವದೊಳು ॥೭॥

ಕಳೆಯುತಂದಿನರಾತ್ರಿಯನು ಮುನಿ ।
ನಿಳಯದಲಿ ತಾವೆಳ್ದು ಮರುದಿನ ।
ಜಲಜಸಖನುದಯದಲಿ ಸಂಧ್ಯಾಕರ್ಮಗಳ ನೆಸಗಿ ॥
ತಳುವದವರನುಮತಿಯ ಕೈಕೊಂ ।
ಡುಳಿಯದೈದುತ್ತಿರಲು ಮುಂಗಡೆ ।
ಯೊಳಗೆ ನಿಂತನು ಖಳವಿರಾಧನೆನಿಪ್ಪ ದಾನವನು ॥೮॥

ಎಳೆಯರಿರ ನೀವಾರು ನಿಮಗೀ ।
ಲಲನೆಯೇನಹ ಳೆತ್ತ ಪೋಪಿರಿ ।
ಕಳೆದುದಲೆ ನಿಮ್ಮಾಯು ವಿಂದಿಗೆ ನಿಲ್ಲಿರೆಂದೆನುತ ॥
ಪಲುಮೊರೆಯುತಾಡೊತ್ತಿ ವೇಗದಿ ।
ನಿಳೆಯಣುಗಿಯೆಡೆಗೈದಿ ಪಿಡಿಯು ।
ತ್ತೆಲೆಗೆ ನಿನಗಾನೊಲಿದೆ ನಿಂದೆನ್ನಂಕವೇರೆನಲು ॥೯॥

ಕಂಡು ಲಕ್ಷ್ಮಣನಣ್ಣದೇವನ ।
ಖಂಡವೈಭವಲಕ್ಷ್ಮಿಗಿಂತೀ ।
ಭಂಡ ದೈತ್ಯಾಧಮನ ತೊಡೆ ತಾನಾಯ್ತೆ ಗತಿಯೆನುತ ॥
ಕೆಂಡಮುಗುಳುತ ನೇತ್ರದಲಿ ಕೋ ।
ದಂಡಕೇರಿಸಿ ಹೆದೆಯ ಬಾಣವ ।
ಕೊಂಡು ಜೋಡಿಸುವನಿತರೊಳು ಮುಂಕೊಂಡು ಬಂದಿವರ ॥

ಪಿಡಿಯುತೇರಿಸಿ ಹೆಗಲ ನಸುರನು ।
ಬಿಡುತ ತನ್ನನು ಮುಂದೆ ನಡೆಯುವ ।
ಸಡಗರವ ಕಂಡಂಜಿ ಸೀತೆಯು ಬೆದರಿ ಕೂಗಿದಳು ॥
ತಡವಗೈವರೆ ರಮಣ ದುರುಳನ ।
ಕಡಿಯಬೇಗದೊಳಲ್ಲದಿರಲೆ ।
ನ್ನೊಡೆಯ ತನ್ನನೆ ಕಡಿದು ಮುಂದಕೆ ತೆರಳು ನೀನೆನುತ ॥೧೧॥

ಲಲನೆಭಯದಿಂದುಲಿದನುಡಿ ತಾ ।
ನಲಗಿನಂದದೊಳಿದೆಯ ನಿರಿಯ ।
ಲ್ಕಲದೊಳಹ ಲಕ್ಷ್ಮಣನಿಗೆಚ್ಚರಿಸಿದನು ರಾಘವನು ॥
ಸೆಳೆಯುತಿರ್ವರು ಕಡುಗಗಳನಾ ।
ಖಳನಭುಜಗಳನರಿದು ದುಮ್ಮಿ ।
ಕ್ಕಿಳೆಗೆ ಶರಗಳನಿರದೆ ದಳೆದರು ದುರುಳನಂಗದಲಿ ॥೧೨॥

ಅಂದು ಬೀಳುತ ನೆಲದಮೇಲವ ।
ನೆಂದನಾರ್ಯೆ ನೀವು ಸರಳುಗ ।
ಳಂದವಚ್ಚರಿ ಸಹಿಸಲಸದಳವಿದಲೆ ತನಗಿನ್ನು ॥
ಸುಂದರಾಂಗನು ರಾಮನೆಂಬುವ ।
ನಿಂದು ಸಿವ್ಮೊಳಗಾವನೈ ಅರ ।
ವಿಂದನಾಭನದಿವ್ಯಮೂರ್ತಿಯ ತೋರ್ಪ್ರದೆನಗೆಂದ ॥೧೩॥

ಇಂತುನುಡಿವ ವಿರಾಧನಿದಿರೊಳ |
ನಂತಮಹಿಮನು ನಿಂದುಸಲೆ ನಿ |
ಶ್ಚಿಂತರಂಗವದೇನು ಪೇಳೆನ್ನಾನೆ ರಾಘವನು ||
ಚಿಂತೆಯುಳಿಯೆನಲೊಡನವನು ನಿ |
ಶ್ಚಿಂತನಾಗುತ ದಿವ್ಯತೇಜೋ |
ವಂತನಹಗಂಧರ್ವ ಪುರುಷನರೂಪನೊಂದುತಲಿ ||೧೪||

ಕ್ಷಮಿಸುವುದು ಜಗದೀಶಬುದ್ಧಿ |
ಭ್ರಮಣೆಯಿಂ ನಾಂಗೈದ ತಪ್ಪನು |
ವಿಮಲಮತಿಯವಧರಿಸು ತನ್ನಯ ಪೂರ್ವಸಂಗತಿಯ ||
ಕಮಲಜನಬಳಿಗೆಂದು ರಂಭೆಯು |
ಗಮಿಸುತಿರಲೊಂದಿರುಳು ಮಾರ್ಗದೆ |
ಕುಮತಿಯಿಂ ನಾನವಳಕೇಳಿಕಲು ವಿಧಿಯುಖತಿಗೊಂಡು ||೧೫||

ಎಲವೊಲೊಗಂಧರ್ವಕನೆ ತುಂಬುರು |
ಬಲುಹಿನಿಂನೀನಿವಳ ನಿಯಮವ |
ನಳಿದಕಾರಣ ರಾಕ್ಷಸಾಧಮನಾಗೆನುತ ಶಪಿಸೆ ||
ಬಳಿಕನಾನತಿ ದೀನಭಾವದಿ |
ನೊಲಿಸೆ ನುಡಿದನು ಮುಂದೆಭಾಸ್ಕರ |
ಕುಲದೊಳುದಯಿಪ ಪುರುಷನಿಂ ನಿನಗಪ್ಪುದಭ್ಯುದಯ ||೧೬||

ಒಂದುಕಾಲದಿ ರಾಮಲಕ್ಷ್ಮಣ |
ರಿಂದು ಮುಖಿಯಹ ಸೀತೆಯೊಡನೈ |
ತಂದು ನೀನಿಹದಂಡಕಾವನದಲ್ಲಿ ಚರಿಸುವರು ||
ಅಂದು ನೀನಾಲಲನೆಯನು ಬಲು |
ಹಿಂದ ಪಿಡಿಯಲು ರಾಮನಾಗ್ರಹ |
ದಿಂದ ಬಾಣವನೆಸೆಯಲೊಂದುವೆ ಮತ್ತೆ ನಿಜತನುವ ||೧೭||

ಇಂತು ಪೇಳ್ದ ಪಿತಾಮಹನ ನುಡಿ |
ಯಂತೆ ನಿನ್ನಿಂದಿಂದು ಬದುಕಿದೆ |
ನೆಂತು ನಿನ್ನುಪಕೃತಿಯ ಮರೆವೆನಪಾರ ಗುಣನಿಲಯ ||
ಮುಂತೆ ನೀಂ ತೆರಳುತ್ತೆ ಕಾಣುವೆ |
ಶಾಂತರಹ ಶರಭಂಗಮುನಿಪರ |
ನಂತರಾತ್ಮಧ್ಯಾನ ಪರರವರಿಂದ ಲೇಸಹುದು ||೧೮||

ತೆರಳ ನೀಂ ಪೋದೆನುತ ಖಚರನು
ಮರಳಲತ್ತಲು ದಾನವಕಳೇ |
ವರವ ನದನಿಳೆಯೊಳಗೆ ನಿಕ್ಷೇಪಿಸಿ ಬಳಿಕ್ಕವರು ||
ಸರಸಿಜಾಕ್ಷಿಯ ಬಳಿಯನೇರುತ |
ಲೊರಸುತಾಕೆಯ ಮನದ ಭೀತಿಯ |
ನಿರದೆ ಪಯಣವ ಬೆಳಸುತಾ ಶರಭಂಗನಾಶ್ರಮವ ||೧೯||

ಕಂಡು ಸಾರುವ ಸಮಯದೊಳಗಾ ।
ಖಂಡಲನು ನಭದೊಳ್ವಿಮಾನದೆ ।
ಮಂಡಿಸುತಲಾಶ್ರಮದೊಳಹ ಮುನಿಯೊಡನೆ ಭಾಷಿಸುತ ॥
ಚಂಡಬಲರಿವರ್‍ೈದೆ ಕಾಣು ।
ತ್ತಂಡಿಸುತ ಮನದಲ್ಲಿ ತಾಂ ಮರೆ ।
ಗೊಂಡು ಜಾರಲು ನೋಡಿ ವಿಸ್ಮಯಗೊಳುತ ರಾಘವನು ॥ ೨೦ ॥

ಮುನಿಯಬಳಿಯನು ಸಾರಲಾತನು ।
ಘನಮಹಿಮ ಪರಮೇಶ ಪಾವನ ।
ಜೆನುಮಯನೆನಿನ್ನಂಘ್ರಿಕಮಲದ ಬರವ ಹಾರೈಸಿ
ಇನಿತುದಿನಕಾದಿರ್ದೆನಿಂದೀ ।
ಜನುಮ ಸಾರ್ಥಕವಾಯ್ತು ಬೊಮ್ಮನ ।
ವಿನುತಲೋಕಕ್ಕತಿಥಿಯಾಗಿಹೆನಿಂದು ತಪದಿಂದ ॥ ೨೧ ॥

ಎನ್ನನೊಯ್ಯಲ್ಕಲ್ಲಿಗಾ ಸಂ ।
ಪನ್ನ ನಿಂದ್ರನು ನಿಂದು ಗಗನದೊ ।
ಳನ್ನು ತಡವೇಕೇದು ನೀನಿಂದೀ ವಿಮಾನವನು ।
ಎನ್ನುತೊಲವಿಂ ಕರೆಯುತಿರ್ದನು ।
ನಿನ್ನ ಬರವನು ಕಂಡು ತಳುವಿದೆ ।
ನಿನ್ನನುಜ್ಞೆಯ ನೀಯಬೇಕೆಂದೆನಲು ಮುನಿವರನು ॥ ೨೨ ॥

ಮುನಿಪ ನಿನ್ನ ತಪಃಪ್ರಭಾವ ।
ಕ್ಕನುಗುಣದ ಫಲವೊಂದಿದ್ದೆ ನಿಜ ।
ಘನ ಮನೋರಥಸಿದ್ಧಿಯಾದುದು ನಿನಗೆ ಬಲುದಿನಕೆ ॥
ವಿನುತ ಲೋಕಕ್ಕಿಂದು ಪಯಣವ ।
ನನುಗೊಳಿಸು ನೀನೆಂದನುಜ್ಞೆಯ ।
ನಿನಕುಲೋದ್ಭವ ನೀಯಲಾ ಯಮಿವರನು ಮುದವಡೆದು ॥೩೩॥

ದೇವಜಿತ್ತ್ರೈಸೋಡೆಯೇರುತ ।
ನೀವು ಮಂದಾಕಿನಿಯದಾಂಟುತ ।
ಪಾವನಾತ್ಮಸುತೀಕ್ಷ್ಣನಾಶ್ರಮಕೈದಲಾಮುನಿಯು ॥
ಠಾವನೀಯುತ ನಿಮಗೆ ಬಹುಸಂ ।
ಭಾವನೆಯನೆಸಗುವನು ತನಗಿ ।
ನ್ನೀವುದಾಜ್ಞೆಯನೆನುತ ಬೆರೆದನು ಶ್ರೌತದಗ್ನಿಯಲಿ ॥೩೪॥

ಬಳಿಕ ಮಲ್ಲಿಯತಾಪಸರ್ಕಳು ।
ಕೆಲರು ವೈಖಾನಸರು ಮತ್ತಂ ।
ಕೆಲರು ಪೂರ್ವದವಾಲಖಿಲ್ಯರು ಕೆಲರೆಲೆಯುಣಿಗಳು ॥
ಪಲವು ಬಗೆಯಾವ್ರತಿಗಳೆಲ್ಲರು ।
ಬೆಳಗುವರೊ ದಿಕ್ತಟವನೆಂಬಂ ।
ತಲಘುತೇಜೋನ್ವಿತರು ಬಂದರು ಬಳಿಗೆರಾಘವನ ॥೩೫॥

ಬಡಿಯುನೆಂತಾವಜ್ರಿಯುಮುರರಿ ।
ಗೊಡೆಯುನಹೆ ನೀನಂತುಮನುಜರಿ ।
ಗಡವಿಪ್ರೊಕ್ಕಿಹೆ ತಾತನಾಜ್ಞೆಯ ಪಾಲಿಸಲ್ಕಿಂದು ॥
ಬಡಮುನಿಗಳಾದೆಮ್ಮ ಬಿನ್ನಪ ।
ಕೆಡೆಯುನೀಯುತ ನಿನ್ನಮನದಲಿ ।
ದೃಢತರೋನ್ನತಕೀರ್ತಿವಡೆಯ್ಯೆ ಮೂರುಲೋಕದಲಿ ॥ ೨೬ ॥

ತಂದೆ ತನ್ನಯ ಸುತರನೊಲಿದಾ ॥
ಮಂದದಿಂ ಸಲಹುವನೊ ಆಪರಿ ।
ಯಿಂದ ರಾಜನು ಜನವ ಸಲಹುವುದಾತ್ಮಧರ್ಮವಲಾ ॥
ಇಂದುನಿನ್ನೀಪ್ರಜೆಗಳಾದೆಮು ।
ಗೊಂದಿರುವ ಕಷ್ಟವನು ಪರಿಹರಿ ।
ಸೆಂದು ಬೇಡುವೆವದನು ಕರುಣಿಸಿ ಸಲಹು ಕರುಣಾಳು ॥ ೨೭ ॥

ಅರಸ ನಮ್ಮಯ ತಪಕೆ ರಕ್ಕಸ ।
ರಿರದೆ ವಿಘ್ನವನೆಸಗಿ ನಮ್ಮನು ।
ಮರುಕವಿಲ್ಲದೆ ಘಾತಿಸುತ ಬಲುಹಿಂಸೆಗೈದಪರು ॥
ಮರೆಯುಹೊಕ್ಕಿಹೆವಿಂದು ನಿನ್ನನು ।
ಶರಣಜನ ಸುರಕ್ಷಕನೆ ಖರೂ ।
ಳರನು ಸಂಹರಿಸುತ್ತ ರಕ್ಷಿಪುದೆಮ್ಮ ನೆನಲವರು ॥ ೨೮ ॥

ಮರುಗಿದನು ಮನದಲ್ಲಿ ಋಷಿಗಳ ।
ದರುಮಕೆಡರುಂಟಾಯ್ತೆ ಶಿವಶಿವ ।
ದುರುಳರಕ್ಕಸರುಬ್ಬಟೆಯ ನಿವರೆಂತು ಸೈಸುವರು ॥
ಬರವಸವನೀಯುತ್ತೆ ಭಯವನು ।
ಹರಿಸಬೇಕೆಂದೆನುತ ರಾಮನು ।
ಭರದೆ ಹೆದೆಯನು ಧನುವಿಗೇರಿಸುತೆಂದನವರೊಡನೆ ॥೨೯॥

ಬೆದರದಿರಿ ಮುನಿಗಳಿರ ನಿಮ್ಮ ।
ಭ್ಯುದಯಮುಂ ನಿಜಪಿತನವಾಜ್ಞೆಯದ ।
ವಿಧಿಯು ಮೆನ್ನನು ವನಕೆ ತಂದುದು ಮೋಕ್ಷ ಯೋಜನವು ॥
ಇದನು ಬಿಟ್ಟೆನಗಿಲ್ಲ ಪೆರತೊಂ ।
ದದಕೆ ಬಂದವನಲ್ಲ ಭೀತಿಯ ।
ನೆದೆಯೊಳಿನ್ನಿಡಸಲ್ಲ ನಂಬುವುದಿದನು ದಿಡವಾಗಿ ॥೩೦॥

ಇಂದು ಮೊದಲಾದುಷ್ಟರಾಕ್ಷಸ ।
ವೃಂದವನು ನೆರೆಕಡಿದು ಮುನಿಜನ ।
ಬಂಧುವೆನಿಪೆನಿಸರ ನಾನುವೆ ನಿಮ್ಮ ತಪಗಳಿಗೆ ॥
ಕುಂದುಬಾರದತೆರದೆ ನೀಂ ಸ್ವ ।
ಚ್ಛಂದದಿಂದವುಗಳನು ಮಾಡುತ ।
ಪಿಂದಣಂದದೆ ಸುಖದೊಳಹುದಿನ್ನೆಂದನಾರಾಮ ॥೩೧॥

ಇಂತುಮುನಿಜನಕಭಯಮೀಯುತ ।
ಮುಂತೆನಡೆದು ಸುತೀಕ್ಷ್ಣಮುನಿಪನ ।
ನಂತ ಸತ್ಕಾರಗಳನೊಂದುತಲವನನುಜ್ಞೆಯಲಿ
ಚಿಂತೆಯಿಲ್ಲದೆ ರಾತ್ರಿಯನು ಬಲು ।
ಸಂತಸದೊಳಾಶ್ರಮದೆ ಕಳೆದ ।
ತ್ಯಂತವಿನಯದೆ ನಮಿಸುತವರಿಗೆ ಮಾರನೆಯದಿನದೆ ॥೩೬॥

ತೆರಳಲಾಜ್ಞೆಯನಾಂತು ಬಳಿಕ ।
ಲ್ಲಿರದೆ ಸಿಂಗಾಡಿಯನು ಭುಜದಲಿ ।
ಧರಿಸಿಮದಿಸಿದ ಗಜದವೋಲು ಮುಂಕೊಂಡು ನಡೆಯುತಿರೆ ।
ತರಳೆ ನೋಡಿದಳಾತ್ಮವಲ್ಲಭ ।
ನಿರವಮೆಲ್ಲನೆ ಸನಿಹಕೈದುತ ।
ಸರಸಭಾವದೊಳರುಹಿದಳು ಮನದರ್ಥವನು ಸೀತೆ ॥೩೭॥

ಚಿತ್ತವಲ್ಲಭ ಲಾಲಿಪುದು ಸತಿ ।
ಬಿತ್ತರಿಸುಮೀನುಡಿಯ ನೊಲವಿಂ ।
ದುತ್ತಮೋತ್ತಮ ಧರ್ಮನಿಷ್ಠನು ನೀನು ಜಗವರಿಯೆ ॥
ಮತ್ತತನಮೇನಿಲ್ಲ ಪರಸತಿ ।
ಯತ್ತ ಬಯಕೆಯದಿಲ್ಲ ಮಾದೊಡ ।
ಮೊತ್ತಿಕೊಂಡಿಹುದೊಂದು ಪರಪೀಡನೆಯ ಕಲ್ಮಷವು ॥೩೮॥

ತಾತನಾಣತಿವಿಡಿದು ಮುನಿಗಳ |
ರೀತಿಯುಲಿ ವನದಲ್ಲಿ ಚರಿಸವಿ |
ನೀತನಂದವೆ ಶಸ್ತ್ರಧಾರಣವೇಕೆ ನಿನಗಿಲ್ಲಿ ||
ಭೂತಹಿಂಸಾಕ್ಷತ್ರ ಧರ್ಮದ |
ನೀತಿ ಸಲುವುದು ರಾಜ್ಯದೊಳಗಿರ |
ಲೀತಪಶ್ಚರ್ಯದೊಳು ಸಲುವುದೆ ಪೇಳು ಮತ್ಪತಿಯೆ ||೨೫||

ಎನ್ನಮನಕೀರೀತಿ ತೋಪ್ಪದು |
ಸನ್ನುತಾಂಗನೆ ನಿನ್ನ ಚಿತ್ತದೊ |
ಳಿನ್ನುತೋರಿದಪರಿಯೊಳೆಸಗುವುದೆನುತ ಸತಿಯುಸಿರೆ ||
ತನ್ನ ಮನದೊಳು ಹಿಗ್ಗಿ ಗುಣಸಂ |
ಪನ್ನನಾರಾಘುವನು ಸತಿಯುರ |
ರನ್ನಕೆಂದನು ಲೋಕಕತಿಹಿತಮಪ್ಪವಾಕ್ಯವನು ||೨೬||

ವಲ್ಲಭೆಯೆ ನಿನಗೊರೆವೆನಿದಕೇ |
ಳಲ್ಲಿ ಪಾರ್ಥಿವನಾಳ್ವನಾ ನೆಲ |
ದಲ್ಲಿ ತಾಂ ಪ್ರಜೆ ವೊರೆಯುನಿಡೆಯುದನೊಲಿದು ರಕ್ಷಿಸಲು ||
ಬಿಲ್ಲುಕಣೆಗಳನ್ನೈದೆ ತಳೆಯುತ |
ಖುಲ್ಲರುಪಟಳವನ್ನುತಗ್ಗಿಪ |
ದಲ್ಲದಿರ್ದೊಡೆ ನರಕಭಾಜನನಪ್ಪನಾನೃಪತಿ ||೨೭||

ಇಂದು ನಾವೀದಂಡಕಾವನ ।
ಕೆಂದು ಬಂದೊಡೆ ಋಷಿಗಳೆಲ್ಲರು ।
ಬಂದು ರಾಕ್ಷಸರಿಂದ ತಮ್ಮಯ ಯಾಗಗಳು ನೃಪನೆ ।
ಹೊಂದಿದುವು ದುರ್ದಶೆಯನವು ನಿ ।
ನ್ನಿಂದಲುಳಿಯಲುಬೇಕು ದುಷ್ಟರ ।
ಕೊಂದುನಮ್ಮನು ರಕ್ಷಿಸೆನಲಾಂ ಕೊಟ್ಟೆನಭಯವನು ॥ ೩೮ ॥

ಕಂದಮೂಲಫಲಾದಿಗಳ ತಾಂ ।
ತಿಂದು ಜಪನಿಯಮೋಪವಾಸಗ ।
ಳಿಂದ ಕಾಯಕ್ಲೇಶವಾನುತ ಘೋರತಪಗಳನು ॥
ಚಂದದಿಂದಾಚರಿಪಮುನಿಜನ ।
ವೃಂದವನು ನೆರೆ ಬಾಧಿಸುತ್ತಿಹ ।
ಹಂದೆರಕ್ಕಸ ಮಂದೆಯನು ಸರಳಿಂದೆ ಸವರುವೆನು ॥ ೩೯ ॥

ನೀರೆನಿನಗೆನ್ನಲ್ಲಿನೇಹವು ।
ಪೂರವೆಂಬುದು ನಿನ್ನ ನುಡಿಯಿಂ ।
ತೋರುವುದು ಬೇರಿಲ್ಲನಡೆಯೆಂದಂದು ತೆರಳುತಲಿ ॥
ಸಾರಿ ಋಷ್ಯಾಶ್ರಮಗಳನು ನಲ ।
ವೇರಿಕಾಲವಕಳೆದು ಕೆಲವೆಡೆ ।
ಮೂರುತಿಂಗಳು ಮತ್ತೆಕೆಲವೆಡೆಯಾರುತಿಂಗಳನೆ ॥ ೪೦ ॥

ಇಂತುನವವರ್ಷಗಳ ಕಳೆಯುತ |
ಲಂತ್ಯದಲಿ ಹತ್ತನೆಯವರ್ಷವ |
ನಂತಮುನಿಸಂಸೇವ್ಯರೆನಿಸುವಗಸ್ತ್ಯಮುನಿವರರ ||
ಪಿಂತಣದ್ಭುತಮಹಿಮೆಗಳನೆನೆ |
ದಂತರಂಗದೆ ಪೊಗಳಿ ತೇಜೋ |
ವಂತರಪ್ಪವರಾಶ್ರಮವ ಪುಗುತೆರಗಲವರಂದು ||೪೧||

ಕ್ಷೇಮವೇನೈ ರಘುಜ ನಿನ್ನೀ |
ಪ್ರೇಮಸೋದರನಿವನು ಕುಶಲಿಯೆ |
ಭಾಮಿನೀಮಣಿ ಸುಖದಿನಿಹಳೇ ಜಾನಕೀದೇವಿ ||
ನೀ ಮಹಾತ್ಮನು ನಿನ್ನ ದರ್ಶನ |
ದಾ ಮಹಾಸುಖವೆನಗೆ ಲಭಿಸಿದು |
ದೀ ಮಹಾಟವಿ ಪೂತವಾದುದು ನಿನ್ನ ಬರವಿನಲಿ ||೪೨||

ಬರುವೆ ನೀಂ ನಿನಗೀಯಬೇಕೆಂ |
ದರಿಭಯಂಕರ ವಿಷ್ಣುಧನುವಿದ |
ನುರುಶರಂಗಳು ಬತ್ತದಿಹ ಬತ್ತಳಿಕೆಯೊಡನಿರದೆ ||
ಮೆರೆಯುವೀ ಖಡ್ಗವುಮನಿಂದಿನ |
ವರೆಗಮೋವಿದೆನಯ್ಯ ನೀಂ ಸ್ವೀ |
ಕರಿಪುದಿವನೆಂದಿತ್ತು ಮಂತ್ರನ್ಯಾಸಪೂರ್ವಕದೆ ||೪೩||

ಧುರದೊಳದಿರಾದಸುರರಸುವನು |
ಹುರಿದು ಮುಕ್ಕುವುವಲ್ಲದಿಲ್ಲವು |
ಕೊರತೆಯಿವುಗಳೊಳಿವು ಸಿಶಾಚರ ಕುಲವಿನಾಶಿಗಳು ||
ಹರಿಯು ಪೂರ್ವದೆ ರಕ್ಕಸರ ಸಂ |
ಹರಿಸಿದನು ತಾನೀಧನುವಿನಿಂ |
ಧರಿಸುತಿದ ನೀಂ ಸುಖವನೊಂದೆನುತಾಗ ಹರಸಿದನು ||೪೪||

ಮುನಿಪನಿತ್ತಾಧನುವು ಮೊದಲಾ |
ದನಿತುವಂ ಸ್ವೀಕರಿಸಿ ರಾಮನು |
ತನಗೆ ವಾಸಕ್ಕೊಂದು ಠಾವನು ಬೆಸಸಿ ನೀವೆನಲು ||
ಮನದೆ ತಾಂ ಕ್ಷಣಮಾತ್ರ ಜಾನಿಸು |
ತನುವಹುದು ನಿನಗೀ ಸಮೀಪದ |
ಬನವು ನೀನಲ್ಲಿರ್ದೊಡಪ್ಪುದು ಸಕಲಸಂಪದವು ||೪೫||

ಅದನು ಕರೆವರು ಪಂಚವಟಿಯೆಂ |
ದದರೊಳೊಣಗವು ಪುಷ್ಪಫಲಗಳು |
ಸದಮಲವು ತತ್ಪುಣ್ಯದೇಶವು ಸೌಖ್ಯದಾಯಕವು ||
ಪದುಮನೇತ್ರನೆ ನಿನ್ನ ಹೃದಯದ |
ಹದನ ಬಲ್ಲೆನು ಠಾವು ನಿನಗದು |
ಮುದವನೀವುದು ಪರ್ಣಶಾಲೆಯ ರಚಿಸು ನೀನಲ್ಲಿ ||೪೬||

ಎಂದು ನುಡಿಯುವಗಸ್ತ್ಯಮುನಿಪಗೆ ।
ವಂದನೆಯ ಗೈದವನನುಜ್ಞೆಯ ।
ನೊಂದಿ ಸೀತಾಲಕ್ಷ್ಮಣರನೊಡಗೂಡಿ ರಾಘವನು ॥
ಮುಂದೆ ಪೋಗುತ ಮಧ್ಯಮಾರ್ಗದೊ ।
ಳೊಂದು ವಟವೃಕ್ಷದೊಳು ಮೇಘ ।
ಸ್ಕಂಧದಂದದಿಸಿರ್ದ ಗೃಧ್ರನ ಕಂಡು ಬೆಸಗೊಂಡ ॥೪೭॥

ಎಲವೊ ನೀನಾರಾವುದೈ ನಿಜ ।
ಕುಲವು ಪೆಸರೇನೆನ್ನೊಳೊರೆಯೆನ ।
ಲಲಘುಮತಿ ಕೇಳಾಂ ಜಟಾಯುವು ಸಖನು ತವಪಿತಗೆ ॥
ಕುಲವ ಪೇಳುವೊಡರುಣಪುತ್ರನು ।
ಬಲಯುತನು ಸಂಪಾತಿಯೆಂಬವ ।
ನಿಳೆಯೊಳಗ್ರಜನೆನಗೆ ನಿನಗಿನ್ನಾಂ ಸಹಾಯಕನು ॥೪೮॥

ನಿನ್ನ ಬಳಿಯೊಳಗಿಹೆನು ಗುಣಸಂ ।
ಪನ್ನ ಲಕ್ಷ್ಮಣನೊಡನೆ ನೀನಿರ ।
ದನ್ಯಕಾರ್ಯಕೆ ತೆರಳೆ ರಕ್ಷಿಸುತಿಹೆನು ಜಾನಕಿಯ ॥
ಮನ್ನಿಪುದು ನೀನೆಂದ ಪಕ್ಷಿಯ ।
ಮನ್ನಣೆಯಿನಾದರಿಸುತೆರಗು ।
ತ್ತನ್ಯನೇ ನೀನೆನಗೆ ಬಾಂಧವನೆಂದನಾರಾಮ ॥೪೯॥

ಪೇಳುತೀಪರಿ ಪಂಚವಟಿಯು ವಿ |
ಶಾಲಸುಕ್ಷೇತ್ರವನು ಸಾರ್ದನು |
ಕೂಲನಾದೀಯೆಡೆಯು ನೋಡೈ ತಮ್ಮ ನಾವಿಲ್ಲಿ ||
ಕಾಲವನು ಕಳೆಯಲ್ಕೆ ತಳರಿನ |
ಶಾಲೆಯೊಂದನು ರಚಿಸು ನೀನೆನ |
ಲಾಲಯವ ಧಿಕ್ಕರಿಸುವಾಶ್ರಮವೊಂದನೆಸಗಿದನು ||೩೦||

ನೋಡಿದನು ರಾಘವನು ಲಕ್ಷ್ಮಣ |
ಮಾಡಿದಾವರಪರ್ಣಶಾಲೆಯ |
ನಾಡಿಗಚ್ಚರಿ ತಮ್ಮ ನಿನ್ನಯ ಬುದ್ಧಿಕುಶಲತೆಯು ||
ನೀಡುವೊಡೆ ನಿನಗುಡುಗೆರೆಯನೀ |
ಕಾಡಿನೊಳು ದುರ್ಲಭವು ಪಡಿಯಿದು |
ಗಾಢತರದಾಲಿಂಗನವು ಕೊಳ್ಳೆನುತ ಬಿಗಿದಪ್ಪಿ ||೩೧||

ಲೋಲಲೋಚನೆಯೊಡನೆ ಮಿಂದು ವಿ |
ಶಾಲಗೋದಾವರಿಯೊಳಮಲದು |
ಕೂಲಗಳ ಧರಿಸುತ್ತ ಸಂಧ್ಯಾದಿಗಳ ನಿರದೆಸಗಿ ||
ಮೇಲೆನಿಪ ಸುಮುಹೂರ್ತದಲಿ ಬಲ |
ಶಾಲಿ ಲಕ್ಷ್ಮಣನೊಡನೆ ಮಾತನ |
ಶಾಲೆಯನು ಸಂಭ್ರಮದೆ ಪೊಕ್ಕನು ದಾನವಧ್ವಂಸಿ ||೩೨||

ಮೊದಲನೆಯ ಸಂಧಿ ಸಂಪೂರ್ಣಂ.

ಎರಡನೆಯ ಸಂಧಿ.

ಸೂಚನೆ|| ಭೋಗದಾಸೆಯ ಶೂರ್ಪಣಖೆಯಸು |
ಮೂಗನರಿದಟ್ಟಲ್ಕೆ ಲಕ್ಷ್ಮಣ |
ನಾಗರಾಮನ ಕೆಣಕಿಯಳಿದರು ಖರಮುಖಾಸುರರು ||

ನೂಕುತಿರ್ದರು ದಿನಗಳನು ನಿ |
ರ್ವ್ಯಾಕುಲರು ತಾವಲ್ಲಿ ಮೂವರು |
ಮೇಕಮಾನಸರಾಗಿ ಮರೆದಾವಿಪಿನದಾಯಸವ |
ಸಾಕು ಸಾಕಾತಪದ ತಾಪವು |
ನೂಕದೆಮ್ಮಿಂದೆಂಬ ಜನದವಿ |
ವೇಕಕುರೆಬೇಸತ್ತನೆನೆ ರವಿದಕ್ಷಿಣಕೆ ಸರಿದ ||೧||

ಸಂದುಸಿಕ್ಕಿತು ತನಗದೆನ್ನುತ |
ಬಂದನಾಹೇಮಂತಭೂಪನು |
ಮಂದಿಯನು ಚಳಿಯೆಂಬ ಸಂಕಲೆಯಿಂದ ಬಂಧಿಸುತೆ ||
ಅಂದಗೆಡಿಸುವ ಮಂಜಿನಸ್ತ್ರಗ |
ಳಿಂದಲಿರಿಯಲು ಸಹಿಸಲಾರದೆ |
ನೊಂದು ಬಯಸಿತು ಮಂದಿ ದಿನಮಣಿಗುತ್ತರಾಯಣವ ||೨||

ನೀರನೆಳಸದು ಜನವು ಪೂವಿನ ।
ಹಾರವಾನದು ಮಿಾಯದಲೆ ಕಾ ।
ಸಾರಗಳೊಳುರೆ ಕಾಯಲಿಚ್ಛೈಸಿದುದು ವಹ್ನಿಯನು ।
ವಾರಿಜಂಗಳ ದಳಗಳುದಿರಿದು ।
ವಾರಿಪೋದುವು ರವಿಯಕಿರಣಗ ।
ಳಾರಯಿಸಿದುವು ಸಕಲಜಂತುಗಳುಷ್ಣವಸ್ತುಗಳ ॥೩॥

ಈ ತೆರದಹಿಮುಕಾಲದೊಳಗನು ।
ಜಾತಸೀತೆಯರೊಡನೆ ರಾಘುವ ।
ನಾತಪೋಜನಯೋಗ್ಯವಾಗಿಹ ಪರ್ಣಮಂದಿರದೆ ।
ಶೀತಭಯದಿಂ ಹರಿಣದಜಿನವ ।
ನಾತುಮೈಸೊಗಸಿಂದ ಮೆರೆಯುತ ।
ವೀತಿಹೋತ್ರನ ದಿವ್ಯತೇಜವನಿಳಕೆಗೈಯುತಿರೆ ॥೪॥

ಬಂದಳವರೆಡೆಗಾಗಿ ರಾಕ್ಷಸ ।
ವೃಂದದೇಳಗೆಗಶುಭದಾಯಿಕೆ ।
ಮಂದಮತಿಗಳಗ್ರನಾಯಿಕೆ ಕುಮುಖಿ ಶೂರ್ಪಣಖಿ ।
ನಿಂದು ನೋಡಿದಳಮಲರಾಘುವ ।
ನಂದಚಂದವ ಕಾಮುಶರಹತಿ ।
ಗಂದು ಮೈಗೊಟ್ಟೆರಗಿನುಡಿಸಿದಳಾ ದೃಢವ್ರತನ ॥೫॥

ಆರು ನೀನೆಲೊವೀರ ನಿನಗೀ ।
ನಾರಿಯೇನಹಳೆತನಾವನ ।
ಪಾರಪೌರುಷನಂತಿಹನು ನಿಮಗಿಲ್ಲಿ ಬರವೇನು ॥
ಶೂರರಹರಕ್ಕರರು ಚರಿಸುವ ।
ಘೋರಕಾನನವೆಂಬುದರಿಯದೆ ।
ವಿಹಾರಿ ನಡೆವುದಕೇನುಕಾರಣವೆಂದಳಾದನುಜೆ ॥೬॥

ನೋಡಿದನು ರಾಘುವನು ಮಿಗೆ ಮಾ ।
ತಾಡಿದನು ಕೇಳಬಲೆ ಲೋಕದೆ ।
ರೂಢವಾಗಿಹಸೂರ್ಯವಂಶದ ದಶರಥೋರ್ವಿಪನಾ ॥
ಗಾಢವೋಹದ ಪುತ್ರರಾವೀ ।
ಗಾಡಿಕಾತಿ ಮದೀಯಸುದತಿಯು ।
ಕಾಡಿಗಾಪಿತೃವಾಕ್ಯಪಾಲನೆಗಾಗಿ ಬರವಾಯ್ತು ॥೭॥

ಕರೆವರೆನ್ನನು ರಾಮನೆನುತಲಿ ।
ಮೆರೆವಲಕ್ಷ್ಮಣನಾಮವೀತಗೆ ।
ಕಿರಿಯನಿವನೆನ್ನಿಂದ ಸೀತಾಹ್ವಯಳು ತಾನಿವಳು ॥
ಅರಿಯಲಗ್ಗದಜನಕ ಚಕ್ರೀ ।
ಶ್ವರನ ಕುವರಿಯು ತನ್ನಭಾಗ್ಯದ ।
ಸಿರಿಯು ನೀನಾರೇತಕೈದಿದೆ ಪೇಳು ನಿಶ್ಚಯವ ॥೮॥

ಸರಸಮಾದಾನುಡಿಯುನಾಲಿಸಿ ।
ಹರಿಸಗಡಲೊಳ್ಮುಳುಗುತಸುರಿಯು ।
ಮೆರೆವಲಂಕಾಧೀಶರಾವಣನನುಜೆ ತಾನಹೆನು ॥
ಧರೆಯೊಳೆನ್ನನು ಶೂರ್ಪಣಖಿಯೆಂ ।
ದೊರೆವರೀಯಭಿಧಾನವನು ಕೇ ।
ಳ್ದರಿಯೆವೆಂಬಾಜನವು ದುರ್ಲಭವಲ್ತೆಲೋಕದಲಿ ॥೯॥

ರಂಭೆಯೂರ್ವಶಿಯುರ್ಕಳೆನ್ನನಿ ।
ತಂಬಬಿಂಬಕೆ ಸಾಟಿಯೇ ಮೇ ।
ಣಂಬುಜೋದ್ಭವನರಸಿ ಸರಸತಿ ತನಗೆ ಸರಿಯಹಳೇ ॥
ಎಂಬೊಡತಿಶಯವಲ್ಲಕೇಳಲ ।
ರಂಬನಾಸತಿಗಿತಿಯರೆನ್ನೀ ।
ಕುಂಭಕುಚಕೇನೆಣೆಯೆ ತೆಗೆ ತನ್ನುಂಗುಟಕೆ ಸರಿಯೇ ॥೧೦॥

ಮಾರಿದೆನು ದೇಹವನಿದನು ನಿನ ।
ಗಾರದರ್ಶನಫಲವೊ ಕಾಣೆನು ।
ಸಾರವಹಸಂಸಾರವೊದವಿದುದಿಂದು ಪುಣ್ಯವಲಾ ॥
ಧೀರರೆನಿಬರೊ ರಾಕ್ಷಸೇಂದ್ರರ ।
ಪಾರಸಾಹಸದೋರಿಬೇಡಿದ ।
ರಾರಿಗೊಲಿಯದ ಚಲುವೆ ನಿನಗಾನೀಗಳೊಲಿದೆನಲಾ ॥೧೧॥

ಬರುವಕಾಲದೆ ಪುಣ್ಯವಾರಿಗು
ವೊರೆಯದ್ಯೆದುವುದೆಂಬನಾಳ್ನುಡಿ |
ಯರಿಯಲೀಗಳು ಸಫಲವಾದುದು ನಿನ್ನವಿಷಯದಲಿ |
ಅರಸ ನೀನಿನ್ನೇಳು ಮನುಮತ |
ನೊರಸೊರಸು ಘನವಾಯ್ತು ತನ್ನನು |
ವರಿಸು ಬಾರೆಂದೆನಲು ನಸುನಗುತೆಂದನಾರಾಮ ||೧೨||

ಸುರರ ಲೆಕ್ಕಿಸದಿರ್ಪದಾನವ |
ರರಸನಿಗೆ ಮಾನಾಪಹರಣವ |
ನಿರದೆ ಬಯಸುವುದಸುರಿ ಕೇಳ್ನನಗಿಂದು ತರವಲ್ಲ |
ಧರಣಿಯೊಳು ನೀಂ ಗೈದದೋಷವ |
ನೊರಗಿಪುದು ಜನವಾತನಲಿ ದನು |
ಜರಿಗಕೀರ್ತಿಯನೀವಮಾರ್ಗಕೆ ಮನವನೀಯದಿರು ||೧೩||

ಜಾಣೆಕೇಳೆಂದೆನ್ನ ನಿಯಮವ |
ಬಾಣವೊಂದೇವಾಣಿಯೊಂದೇ |
ಪ್ರಾಣಪದಕವ ಪೋಲ್ವಪತ್ನಿಯುವೋರ್ವಳೇ ತನಗೆ |
ಮಾಣು ನಿನ್ನಭಿಲಾಷೆಯನು ಶಿವ |
ನಾಣೆ ನಾನಿದ ತಪ್ಪಿ ನಡೆಯೆನು |
ಕೇಣಗೊಳ್ಳದೆ ತೆರಳು ನೀನಿನ್ನೆಂದು ನೃಪನೊರೆದ ||೧೪||

ಗಾಯವನು ತೋರಲ್ಕೆ ವೈದ್ಯನು ।
ಮಾಯಿಸುವ ಮದ್ದೀಯದಿರ್ಪನೆ ।
ಕಾಯಬಲಪುಷ್ಟಿಯನು ಪಡೆದಿಹನಿನ್ನವಂದಿಗರು ॥
ಕಾಯಜಾತನ ತಾಪಕೌಷಧ ।
ವೀಯಬೇಕೆಂದಬಲೆಯಾಚಿಸ ।
ಲೀಯದಿರ್ಪುದು ಮತವೆ ಸುಡು ನಿನ್ನನುಜೆತವ್ರತವ ॥೧೪॥

ಎನುತೆ ದುರುಳೆಯು ಹಲುಬುತಿರಲಾ ।
ಮನುಕುಲೇಶನು ಕೇಳಿ ಸೀತೆಯ ।
ಮನದ ಬೇಸರನೊರಸಬೇಕೆಂದಂದು ಮನದಂದು ॥
ದನುಜೆ ತನಗೀಕಾರ್ಯ ಸಲುವುದೆ ।
ವನಿತೆ ಜತೆಯೊಳಗಿಹಳು ನೀನೆ ।
ನ್ನನುಜನನು ವರಿಸಿಂದು ತಾನೇಕಾಂಗಿಯಾಗಿಹನು ॥೧೬॥

ಭೇದವೇನನುಜನೊಳು ನಿನಗದು ।
ಸಾಧುವೆಂದೆನಲವಳು ಕಾಮನ ।
ಬಾಧೆಗಾರದೆ ಪೋಗಿ ಯಾಚಿಸಲದಕೆ ಸೌಮಿತ್ರಿ ॥
ಸಾಧುಮಾರ್ಗದೆ ಬೊಮ್ಮಚರಿಯವ ।
ಸಾಧಿಸುತ್ತಿಹೆನವಧಿಯನ್ನೆಗ ।
ವಿಾದುರಾಗತವಾಗದೆನ್ನೊಳು ಸಾಗು ನೀನೆನಲು ॥೧೭॥

ಕೋಪವುಕ್ಕಿದುದೊಡನೆ ಮನ್ಮಥ ।
ತಾಪ ಸುಕ್ಕಿದುದೆನ್ನನೀಪರಿ ।
ಪಾಪಿಗಳು ಪರಿಹಾಸಗೆಯ್ವವೊಲಾಯ್ತಲಾ ಎನುತ ॥
ಓಪಳೆರ್ದಪಳೆಂಬಗರ್ವವೊ ।
ಭೂಪುಭೂಪನೊ ಹಂದೆರಾಮನೆ ।
ಯಾಪಿನಾಕಿಯುಕರೆಯುತುಳುಹಾ ನಿನ್ನವಲ್ಲಭೆಯ ॥೧೮॥

ಅರಿಚುತೀಪರಿ ಕುಪ್ಪಳಿಸಿ ಮುಂ ।
ಬರಿದು ಸೀತೆಯಮೇಲೆ ರಭಸದಿ ।
ನೆರಗಲೈತಹದುಷ್ಟೆಯನು ಕೈಯಿಂದಲಡಗಟ್ಟೆ ॥
ಅರಸ ಸೂಚಿಸಲೊಡನೆ ಲಕ್ಷ್ಮಣ ।
ನಿರದೆ ಸರಳಂ ಮೂಗುಕಿವಿಗಳ ।
ನರಿಯೆ ಹಾಹಾರವದೆ ಹಾಯ್ದಳು ಬಂದಪಥವಿಡಿದು ॥೧೯॥

ಸದೆದು ಸುಜನರನಾಜನಸ್ಥ ।
ನದಲಿ ಬಹುಬಲದೊಡನೆ ರಾಜಿಪ ।
ಮದಮುಖರ ಖರದೂಷಣರ ತನ್ನನುಜರೆಡೆಗಿರದೆ ॥
ಬೆದರುತೊದರುತ ಮುಖದೆ ಪರಿವಾ ।
ರುಧಿರಮಂ ತಾನುಟ್ಟಸೀರೆಯೊ ।
ಳದಿಮುತರಿಚುತ ಬಂದು ಬಿದ್ದಳು ಕಾವುದೆಂದೆನುತ ॥೨೦॥

ನೋಡಿದನು ಖರನಾತ್ಮಸೋದರಿ ।
ಗಾಢಬಾರದಭಂಗವೊದವಿತೆ ।
ದಾಡೆಯಲುಗಿದನೀಚನಾವನು ಕಾಲಭೈರವನ ॥
ಆಡು ವನಿತಾಮಣಿಯೆ ನಿನಗೀ ।
ಕೇಡದಾರಿಂದಾಯ್ತು ಪಾಪಿಯು ।
ಬಾಡನಾರೋಗಣೆಗೆ ಬಡಿಸುತ ನಿನ್ನ ತಣಿಸುವೆನು ॥ ೨೧ ॥

ಸುರರು ಯಕ್ಷರು ಕಿನ್ನರರು ನ ।
ಮ್ಮೊರೆಗೆ ಬರ್ಪರೆ ಸಾಲರಾಹುಲು ।
ನರರ ಮಾತಂತಿರಲಿ ಗಣನೆಯೊಳಿಲ್ಲ ನಮಗವರು ॥
ಹರಿಹರಬ್ರಹ್ಮಾದಿಗಳು ನ ।
ಮ್ಮರಮನೆಯ ಕಾದಿಹರು ಶಿವಶಿವ ।
ಪಿರಿಯ ಸೋಜಿಗವಲ್ತೆ ನಿನ್ನಯ ವಿಕೃತರೂಪವಿದು ॥ ೨೨ ॥

ಎಂದು ನುಡಿವಾದನುಜಪತಿಯೊಡ ।
ನೆಂದಳಂತಾಶೂರ್ಪಣಖಿ ಕೇ ।
ಳ್ಬಂದಿಹರು ಬನಕಿಂದಯೋಧ್ಯಾಧಿಪನ ದಶರಥನ ॥
ನಂದನರ್ಕಳು ರಾಮಲಕ್ಷ್ಮಣ ।
ರೆಂದು ನಾಮವವರ್ಗೆ ರಾಮಂ ।
ಗಿಂದುನಿಭಮುಖಿ ಸೀತೆಯೆಂಬಳು ಪತ್ನಿಯಾಗಿಹಳು ॥ ೨೩ ॥

ರೂಪಿನಲಿ ಮನುಮಥನನದಟಿನೊ ।
ಳಾಪಿನಾಕಿಯ ಸೋಲಿಪರು ವರ ।
ಚಾಪಹಸ್ತರು ಕೋಮಲಾಂಗರು ಮೇಣ್ ಸಹೋದರರು ॥
ತಾಪಸರವೋಲ್ಸಾರುಡೆಯನಾಂ ।
ತಾಫಲಂಗಳ ಮೆಲುವರೆಂತುಂ ।
ಚಾಪಲಂಗಳಗೆದೆಯನೀಯರು ಧೀರಮಾನಸರು ॥ ೬೪॥

ಆತಳೋದರಿ ಸೀತೆ ಭುವನ।
ಖ್ಯಾತೆ ಸುಗುಣೋಪೇತೆ ಸಜ್ಜನ ।
ಗೀತೆ ದೋಷಾತೀತೆ ಸತ್ಕುಲಜಾತೆ ಸುವಿನೀತೆ ॥
ಆತರುಣಿಯನು ನಿನಗೆ ತರಲೆಂ ।
ದಾತುರದಿನಾನೈದಲೆನಗಾ ।
ಪಾತಕಿಯು ಲಕ್ಷ್ಮಣನು ತತ್ಕ್ಷಣವೀವಿಲಕ್ಷ್ಮ ॥೬೫॥

ಗೈದನೆನುತಳುತಿರ್ಪ ತಂಗಿಯ ।
ನಾವರಿಸಿ ಖರನಿರದೆ ಬಲವನು ।
ಮೋದದಿಂ ಸಂವರಿಸಿ ಪೊಕ್ಕನು ಪಂಚವಟಿಯನ್ನು ॥
ಆದುದದ್ಭುತರಭಸ ಭೇರೀ ।
ನಾದ ಕಿವುಡೇಳಿಸಿತು ಜಗವನು ।
ಹೋದಕಿವಿಮೃಗಗಳದನುಜೆಯ ಕಡೆಯುದಂಡೆನುತ ॥ ೬೬ ।

ಅರಿದು ರಾಮನು ಲಕ್ಷ್ಮಣನೆ ನೀಂ ।
ಧರಣಿಜೆಯನೆಚ್ಚರದೆ ಕಾದಿರು ।
ತರಿವೆನಾನೀದುರುಳರನು ಬಿಡದೆನುತ ಬಿಲುಗೊಂಡು ॥
ಅರಿಗಳೇ ನೀವೆಮಗೆ ಕಾರಣ ।
ವರಿಯಬಾರದು ತನಗೆ ತವಸಿಗ ।
ಳರವನಾಂತೆವೆಮ್ಮೊಳಗೆ ವೈರವದೆಂತು ನಿಮಗಾಯ್ತು ॥೨೭॥

ದುರುಳೆಯೊರ್ವಳು ನಮ್ಮ ತರುಣಿಯ ।
ನಿರಪರಾಧೆಯ ಭಕ್ಷಿಸುವೆನೆಂ ।
ದೆರಗಲಬಲೆಯ ಕೊಲುವುದನುಚಿತವೆಂದು ನಾವರಿಗು ॥
ಕೊರೆದೆವೈ ಕಿವಿಮೂಗುಗಳ ನೀ ।
ಧುರಕೆ ನೀವಿಂದೇತಕೈದಿದಿ ।
ರೊರೆವುದೆಮ್ಮಪರಾಧವೇನೆಂಬುದನು ನೀವೀಗ ॥೨೮॥

ದಂಡಕಾವನತಾಪಸರು ನಿ ।
ಮ್ಮಂಡಲೆಯ ಸೈರಿಸದೆ ತನ್ನನು ।
ಕಂಡು ಕೇಳದರಿತ್ತನಭಯವನಾಮಹಾಜನಕೆ ॥
ಪುಂಡಗೆನಿಪಸುರರನು ಮತ್ಕೋ ।
ದಂಡಕಾಹುತಿಯಾವೆನೆನುತಲಿ ।
ಕಂಡು ನಿಮ್ಮಾದಂಡಿಯನು ಹುರಿಗೊಳಿಸಿತಾವಚನ ॥೨೯॥

ಹೆಂಡಿರಾಸೆಯು ಮಕ್ಕಳಾಸೆಯು ।
ಕಂಡುಕೇಳಿವರಾಸೆ ನಿಮಗಿರೆ ।
ಖಂಡೆಯುದವೋಲಾಣೆಯಿಡುವುದು ಸಜ್ಜನರ್ಕಳನು ॥
ಕಂಡೊಡೀದಿನವೊದಲು ನಿಮ್ಮಯ ।
ಮಂಡೆಗಳ ಬಾಗಿಸುತ ದೂರದೆ ।
ಕೆಂಡವನು ಕಂಡಂತೆ ಜಾರುವೆವೆಂದು ನೀವೀಗ ॥ ೩೦॥

ಅಲ್ಲದಿರ್ದೊಡೆ ನಿಮ್ಮನೀಗಳೆ ।
ಹುಲ್ಲುಮೆದೆಯನು ಕಿಚ್ಚು ಸುಡುವಂ ।
ತಿಲ್ಲೆ ನಿರ್ನಾಮರನು ಗೆಯ್ದಪೆನೆನಲು ರಾಘವನು ॥
ಕಲ್ಲಿನೊಳು ಮಳೆಗರೆದೊಡೇನದು ।
ಮೆಲ್ಲಿತಹುದೇ ರಾಮವಾಕ್ಯದ ।
ಬಲ್ಲವಿಕೆಯನು ಖುಲ್ಲರರಿವರೆ ಹಾಯ್ದರೊಗ್ಗಡಿಸಿ ॥ ೩೧॥

ದಾನವರು ಪದಿನಾಲ್ಕುಸಾವಿರ ।
ವಾನುವಾಬಗೆಯೆಂತು ರಾಮನು ।
ತಾನದೊರ್ವನೆ ನಿಂತು ಕಲಕುವುದೆಂತು ಪಗೆಗಡಲ ॥
ಏನಗೈದಪನೆಂತು ಸೋಸುವ ।
ನೀನಿದಾನವ ನೋಳ್ಪವೆನ್ನುತ ।
ಲಾನಭೋಂಗಣದೊಳಗೆ ನೆರೆದರು ಶಕ್ರಮುಖಸುರರು ॥ ೩೨॥

ಧರೆಯು ಜನಕಿತ್ತಧಿಕಬಾಧೆಯ ।
ಸುರರ ಸಂಕಟಗೊಳಿಸಿ ಧರ್ಮವ ।
ಸರಕುಗೆಯ್ಯದೆ ವಿಾರಿ ಸಲೆ ದುರ್ಮಾರ್ಗಪರರಾಗಿ ॥
ನರಕಭೀತಿಯು ತೃಣಕೆ ಸಮವೆಂ ।
ದರಿತು ನಡೆಯುವ ದುರುಳರಕ್ಕಸ ।
ಗುರಿಗಳೀ ನಿವ್ಮಾಯು ಪೂರ್ತಿಯನೊಂದಿತಿಂದಿನಲಿ ॥ ೩೩ ॥

ಎಂದು ಸರಳುಗಳಿಂದ ಸುಭಟರ ।
ವೃಂದವೃಂದಗಳನ್ನು ಸದೆದಾ ।
ಸ್ಯಂದನಂಗಳಕೂಡೆ ರಥಿಕರನಂದು ತರಿಯುತ್ತ ॥
ಮುಂದೆ ಬಹಮದದಾನೆಗಳ ಬಲು ।
ಸಂದಣಿಯನುರುಳಿಸುತಲಶ್ವಗ ।
ಳೊಂದುಮಿಲ್ಲನೆ ಸವರಿ ಹುಡಿಗುಟ್ಟಿದನು ರಾಘವನು ॥ ೩೪ ॥

ದಿಟ್ಟರವರೊಳ್ಕೆಲರು ಸಮರದ ।
ಜಟ್ಟಿಗಳು ಮುಂದೈದಿ ರಾಮನ ।
ಗಟ್ಟಿಸಿದರಾಪರಿಘತೋಮರಕುಂತಖಡ್ಗದಲಿ ॥
ಪೆಟ್ಟು ತಾಗಿತು ರೋಷವೇರಿತು ।
ಹುಟ್ಟುಗುಟ್ಟುವೆನಿವರನೆನುತಲಿ ।
ತೊಟ್ಟು ಗಾಂಧರ್ವಾಸ್ತ್ರವನು ಬಿಡದೆಚ್ಚನಾಭೂಪ ॥ ೩೫ ॥

ಕಕ್ಕಿದರು ನೆತ್ತರನು ಕೆಲಬರು |
ಸೊಕ್ಕಮುಲಗಿದರಂದನೇಕರು |
ಮಿಕ್ಕವರು ಬೆಕ್ಕನವನಾಂತೋಡಿದರುಳದು ಕಳನ ||
ತಿಕ್ಕಿಮುಕ್ಕಿತು ಸರಳು ಸಕಲರ |
ನಕ್ಕಜವು ತಾನೆನುತ ದೂಷಣ |
ನುಕ್ಕುಗಾರನು ಪೊಕ್ಕನಾಹವಕಂದು ಸಮತಳಿಸಿ ||೩೬||

ಸಿಡಿಲಿಗೆಣೆಯುಹಸರಳ ಪೂಡುತ |
ತಡೆದುಕೊಳ್ಳಂದೆಸೆಯುಲದನಿ |
ಕ್ಕಡಿಯುಗೈಯುತ ರಾಮನಾತನ ಬಿಲ್ಲನೊಂದರಲಿ ||
ಕಡಿದು ನಾಲ್ಕಂಬಿನಲಿ ಕುದುರೆಗ
ಳೊಡಲನಿರದೆಚ್ಚೊಂದುಶರದಲಿ |
ಕೆಡಹಿ ಸೂತನ ಮೂರುಬಾಣದಿ ದೂಷಣನನೆಚ್ಚ ||೩೭||

ಉರವಣಿಸಿ ಕೈಯೊಡನೆ ಖಳತಾ |
ನುರುಬಿದನು ತರುಬಿದನು ಪರಿಘದೊ |
ಳೆರಗಿದನು ಹಗೆಹರಿದುದೀದಿನವೆನುತ ಬೊಬ್ಬಿರಿದು |
ಸತಳ ಸುರಿದನು ರಾಮನೊಡನೆಯೆ |
ತರಿದನಾತನ ಭುಜಗಳೆರಡನು |
ಧರಣಿದೊಡಲನು ಬಿಡಲು ಬಿದ್ದನು ಗಿರಿವೊಲಾಖಳನು ||೩೮||

ಆಸಮಯದೊಳಗಂತರಿಕ್ಷದೆ ।
ವಾಸವನು ಮೊದಲಾದಸುರರು ।
ದ್ಭಾಸಿಸುಮಗಳ ಚೆಲ್ಲಿದರು ರಾಘವನ ಸಿರಿಮುಡಿಗೆ ॥
ಈಸುವನು ನೋಡಿದನು ಮನದಲಿ ।
ಗಾಸಿಯಾಂತನು ತಮ್ಮನಳಿವಿಂ ।
ಗೈಸಲೇಎನುತೆದ್ದುಕೊಂಡನು ಧನುವನಾಖರನು ॥೭೯॥

ತಾಳುತಾಳೈ ದೇವ ನಿನಗೀ ।
ಹಾಲುಹಸುಳೆಯು ಸಮನೆ ತನಗಿಂ ।
ದೂಳಗವ ಕೊಡು ನಿನ್ನಸೇನಾನಾಥನಾನಲ್ತೆ ॥
ಜಾಲಗೈಯದೆ ಕೊಲುವೆನೆನ್ನುತ ।
ಶೂಲವೊಂದರಿನಿಡಲು ತ್ರಿಶಿರನು ।
ಕೋಲುಗಳನಿರದದನೆ ಖಂಡಿಸುತಾಕಕುತ್ಸ್ಥಜನು ॥೮೦॥

ಬಡನೆ ಕವಲಂಬುಗಳ ಜೋಡಿಸಿ ।
ಬಿಡದೆ ತಲೆಗಳ ಮೂರಸಿಳುಹ ।
ಲ್ಕಡರ ನಭದೊಳ್ಕುಣಿದುಬಿದ್ದುವು ಖರನ ಸಮ್ಮುಖಕೆ ॥
ಕೆಡೆದತಲೆಗಳ ಕಂಡು ಕೋಪದೆ ।
ತಡೆಯದೆದ್ದನು ಕಾರ್ಮುಕವ ಜೇ ।
ವಡೆದು ರಾಮನಮುಂದೆ ಸುಳಿಸಿದನಮರರಿಪು ರಥವ ॥೮೧॥

ಎಲೆಲೊ ರಾಘವ ನಿನ್ನ ಭುಜಬಲ ।
ದಳವನರಿಯದೆ ನಮ್ಮ ಕೆಣಕಿದೆ ।
ಕೆಲರಹುಲುರಕ್ಕಸರ ಕೊಂದಿಹ ಗರುವಗರಹೊಡೆದು ॥
ಸಲೆ ಪರಾಕ್ರಮಿಯೆನುತ ಬೆರೆತಿಹೆ ।
ನಿಲಿಸು ನಿನ್ನೀಕೊಬ್ಬನೀಗಳೆ ।
ಕಳುಹುವೆನು ಯಮಪುರಕೆ ನಿಲ್ಲೆಂದೊದರಿದನು ಖರನು ॥೪೨॥

ಆದುದಾಯಿತು ನೀನಳಿಯೆ ತವ ।
ಸೋದರಿಗೆ ಕಿವಿಮೂಗು ಬರ್ಪುವೆ ।
ಈದುರಾಗ್ರಹವೇಕೆ ನಿನ್ನೊಡನಿರ್ದಭಟರೆಲ್ಲ ॥
ಹೋದರಿದರಿಂದೆಂದು ಬಗೆಯುತೆ ।
ಕಾದುವಾಸೆಯನುಳಿದು ಬದುಕುವ ।
ಹಾದಿಯರಸುವುದೊಳ್ಳಿತೆಂದನು ನಗುತ ದಾಶರಥಿ ॥೪೩॥

ಬರಿಯಖರನಲ್ಲಾನು ನಿನ್ನಯ ।
ಹರಣಜಳವನು ಪೀರ್ವದಾರುಣ ।
ಖರಕರನಲಾ ತಂಗಿಗೊದವಿದ ಮಾನಭಂಗವನು ।
ಹರಿದು ಕಳೆವುದಸಾಧ್ಯವೇ ನಿ ।
ನ್ನರಸಿಯಾ ಕಿವಿಮೂಗುಗಳನಾ ।
ನರಿದು ನಿನ್ನನು ಕೊಲುವೆ ನೋಡೆಂದೆಚ್ಚನಾಖಳನು ॥೪೪॥

ಎಚ್ಚ ಕಣೆಗಳ ರಾಮನಾಗಳೆ ।
ಕೊಚ್ಚಿದನು ಬಳಿಕವನ ರಥವನು ।
ಮುಚ್ಚಿದನು ಕೆಂಗರಿಯ ಪೊಸವುಸೆವೆತ್ತಬಾಣದಲಿ ॥
ಕಿಚ್ಚನುಗುಳುವಶರಗಳಿಂ ಖರ ।
ನುಚ್ಚಗಲೊಡಲನು ನೊಂದು ದೇವನು ।
ನುಚ್ಚುನುರಿಯಾಗಿಸಿದನಾತನ ತೇರನಾಕ್ಷಣದೆ ॥೪೫॥

ಲೇಸುಲೇಸೈ ರಾಮ ಕದನದ ।
ವಾಸಿ ನಿನಗಿನಿತೇಕೆ ನಿಲಿಸೈ ।
ಯೀಸುಪರಿಯಂತರವು ಕಾಣದೆ ಮೋಸವ್ರೋದೆನಲಾ ॥
ಈಸಿಕೊಳ್ಳೆನ್ನೀಶರಂಗಳ ।
ಗಾಸಿಯೊಂದದೆ ನಿಂದೆಯಾದೊಡೆ ।
ಸಾಸಿ ನೀನೇ ಮೂರುಲೋಕದೊಳೆನುತ ತೇರುಳಿದು ॥೪೬॥

ಶರಗಳೋ ಕಡೆಗಾಲದಬುದಿಯ ।
ತೆರೆಗಳೋ ನಡುವಗಲದಿನಪನ ।
ಕರಗಳೋ ಎಂಬವೊಲು ಕರೆದನು ಶರವ ಸಾಸಿರವ ।
ಬರುವಬಾಣಂಗಳಿಗೆ ಭಾರಿಯ ।
ಸರಳನೆಸೆಯುತೆ ಕತ್ತರಿಸಿದನು ।
ಮರಳೆ ಮೊನೆಗಣೆಗಳನು ಬಿಟ್ಟನು ಬೇಗ ರಾಘವನು ॥೪೭॥

ಖರನ ಕರಥನು ಮುರಿದುಬಿದ್ದುದು ।
ಬೆರಗನಾನುತಲಾಖಳಾಧಮು ।
ನುರುವಗದೆಯಿಂದಪ್ಪಳಿಸಿದನು ದೂಷಣಾಂತಕನ ॥
ಕೆರಳಿ ಪಜ್ಜೆಯನೆಳೆದು ಪಿಂದಕೆ ।
ಭರದೊಳೈಂದಾಸ್ತ್ರದಲಿ ರಾಮನು ।
ಖರನ ಶೀರ್ಷವನಿಳುಹೆ ಪೊಗಳಿದರಭ್ರದಲಿ ಸುರರು ॥೪೮॥

ಅರಸಿ ಕಂಡಳು ತನ್ನರಮಣನ ।
ಧುರದಜಯುವನು ಬಾಚಿ ತಬ್ಬಿದ ।
ಳರಸ ನೊಂದ್ಯೆ ಪಾಪಿದನುಜರ ಕೈಗಳಿಂದಕಟಾ ॥
ಧರೆಯ ಸಾಮ್ರಾಜ್ಯವನು ನೀಗು ।
ತ್ತುರುತರದ ವನವಾಸಕಷ್ಟದೊ ।
ಳಿರುವ ನಿನಗೀದುರುಳರೊಂದೆಡೆ ಹಿಂಸೆಗೈವರಲಾ ॥ ॥೪೯॥

ಹರಿಯು ನೀಂ ನಿನಗೇಪರಿಯುಬೇ ।
ಸರವುಮಿಲ್ಲವೆನುತ್ತ ಲೋಕದೊ ।
ಳೊರೆವರಾವಾತಿರಲಿ ನರನಾಗುದಯಿಸಿದ ಬಳಿಕ ॥
ಮೆರೆವವಾಂಸದ ಮಜ್ಜೆಯೆಲುವಿನ ।
ಜೆರಕೆಯಿಂ ಬಿಗಿದಿರ್ಪತನುವಿದ ।
ಸಿರಿಯೆ ನೋಯದೆ ಮುದವನಾಂಪ್ರದೆ ಎಂದಳಾಸುದತಿ ॥೫೦॥

ಅರಸಿ ನಿನ್ನಾಲಿಂಗನೆಯಸುಖ ।
ದೊರೆದೊಡೆನಗಿರದಾವಗಂ ತಾಂ ।
ಬರಲಿ ಬರ್ಪಕಷ್ಟವೆಲ್ಲವು ಕೊನೆಗೆ ಹಿತಕರವು ।
ಅರಿಗಳಾಯುಧವೆನ್ನ ಘಾತಿಸಿ ।
ಕೊರಗಿಸುವುದೇ ನಿನ್ನ ಕೋಮಲ ।
ಕರತಲಸ್ಪರ್ಶಾಮೃತಾಸೇಚನೆಯು ಬಲವಿರಲು ॥೫೧॥

ರಾಮವಾಕ್ಯಾಮೃತದ ವೃಷ್ಟಿಗೆ ।
ಕೋಮಲಾಂಗಿಯು ಬಗೆನವಿಲು ಸು ।
ಪ್ರೇಮದಿಂ ನಲಿದಾಡೆ ಸಮಯವು ತಮಗಿದೆಂದೆನುತ ।
ವ್ಯೈಮುರೆತ ಖರದೂಷಣಾದ್ಯರ ।
ಕೈಮೆಯಡಗಿಸಿ ನಮ್ಮಸಲಹಿದ ।
ಭೀಮವಿಕ್ರಮ ಜಯಜಯೆಂದುದು ಬಂದು ಮುನಿಸಿಕರ ॥೫೨॥

ಸುರಪನನು ಶರಭಂಗಮುನಿಪನ ।
ವರತಪೋವನಕೆಳಸಿ ಸಕಲರು ।
ಬೆರಸಿ ಯೋಜಿಸಿ ದುಷ್ಟನಿಗ್ರಹಕೋಸುಗವೆ ನಾವು ।
ಅರಸ ನಿನ್ನನು ತಂದೆವಿಲ್ಲಿಗೆ ।
ದುರುಳರೀದಿನವಳಿದುಪೋದರು ।
ಪರಮಪುರುಷನೆ ಸೈರಿಸುವುದೆನೆ ರಾಮ ಮನ್ನಿಸಿದ ॥೫೩॥

ಅಂತು ಸಂಧಿ ೨ಕ್ಕಂ ಪದ್ಯಂಗಳು ೧೦೫ ಕ್ಕಂ ಮಂಗಳಂ.

ಮೂರನೆಯ ಸಂಧಿ

ಸೂಚನೆ॥ ದಶಮುಖನಕಂಪನನ ಮುಖದಿಂ ।
ದಸಮುಖರಮುಖರಳಿವನರಿದು ।
ಬ್ಜಸದಿ ಮಾರೀಚನಸಹಾಯದಿ ನವಸಿಜೆಯನೊಯ್ದಂ ॥

ಖರನಮರಣವ ಕಂಡು ಲಂಕಾ ।
ಪುರಿಗಕಂಪನನೆಂಬರಾಕ್ಷಸ ।
ನಿರದೆ ಭರದಿಂದೋಡಿ ಕಾಣುತ ರಾವಣಾಸುರನ ॥
ಖರನೆಮೊದಲಾದಖಿಳದನುಜರು ।
ಧುರದೆ ಹತರಾದುದನು ಮೇಣ್ಬಿಂ ।
ಧುರಜನಸ್ಥಾನದ ವಿನಾಶವನರುಹಿದನು ಬಳಿಕ ॥೧॥

ಕೇಳದೊಡನೆಯೆ ರೋಷವಹ್ನಿ ।
ಜ್ವಾಳೆಯುಂಗವಸುಡಲಕಾಲದೆ ।
ಕಾಲನೆಂತಾರಾಕ್ಷಸೇಂದ್ರರ ಸೋಂಕಲೆಳಸಿದನು ॥
ಕೋಳುಹೋದುದೆ ತನ್ನ ಪಾಳೆಯು ।
ಪೇಳು ತನ್ನನು ಗಣಿಸದದನುರೆ ।
ಪಾಳಸೆಸಗಿದಖೂಳನಾವನು ಬೊಮ್ಮನೋ ಹರಿಯೋ ॥೨॥

ಎಂದು ಬೆಸಗೊಳುತಿರ್ಪದನುಜನ ।
ಮುಂದುಗಡೆಯೊಳ್ಬಂದು ಬಿದ್ದಳು ।
ಮಂದಿ ಬೆದರಲು ಮೂಕೊರತಿಯಾಕುಮತಿಕುಹಕಕೃತಿ ॥
ಇಂದಿದೇನಿದು ಬಿದ್ದುದೆನುತಲಿ ।
ಸಂದೆಗಂಬಡುತಾಗ ಕಂಡನು ।
ಸಂದಕಿವಿಮೂಗಿನ ಲತಾಂಗಿಯ ತನ್ನತಂಗಿಯನು ॥ ೩ ॥

ಏನಿದೇನಿದು ತಂಗಿ ತಾನೀ ।
ಹಾನಿಯಾರಿಂದಾಯ್ತು ನಿನಗೀ ।
ಮಾನಭಂಗವನೆಸಗಿದಾತನು ಜೀವದಿಂದಿಹನೆ ।
ಆನಪ್ರಂಸಕನಾವನೆಲ್ಲಿಹ ।
ನೇನುಕಾರಣವೆಂಬುದೆಲ್ಲವ ।
ನೀನುನನ್ನೊಡನುಸಿರು ಬೇಗದೊಳೆಂದು ಖಳನುಡಿದ ॥ ೪ ॥

ಅಣ್ಣ ನೀನಿದನೇಕೆ ಕೇಳುವೆ ।
ತಣ್ಣಗಾದುದು ದನುಜರೈಸಿರಿ ।
ನಿನ್ನವಂದಿಗರಿರಲು ರಾಕ್ಷಸಕುಲವು ವರ್ಧಿಪುದೆ ।
ತನ್ನದೇಶವನಿತ್ತುಮೇಣು ।
ತ್ಪನ್ನವೇನಾದ್ಯಂತಜನಗಳ ।
ಗುನ್ನತಸ್ಥಿತಿಯೊದವಲೇನೇನಿಹುದುಸಾಧನವು ॥ ೫ ॥

ಎಂಬಿವನು ತಾಂ ಬಗೆಗೆ ತಾರದೆ |
ದಂಭದಧಿಕಾರಿಗಳ ಮಾತನು |
ನಂಬುತವರಂತಿರ್ಪ ನೃಪತಿಯ ರಾಜ್ಯಮುಳಿಯುವುದೇ ||
ಕುಂಭಕುಚೆಯರಿಗೊಲಿದು ನೀನಲ |
ರಂಬನಾಟದೆ ಹೊತ್ತುಕಳೆಯಲು |
ಚುಂಬಿಸಳೆ ನಿನ್ನಿಳೆಯನಪಜಯಲಕ್ಷ್ಮಿ ತಾನೊಲಿದು ||೬||

ಮೂಜಗವು ತಲ್ಲಣಿಸೆ ಸಕಲರ |
ನಾಜಿಯಲಿ ಗೆದ್ದುದಕೆ ಫಲವೇ |
ನಾಜನಸ್ಥಾನವಲೆ ವಿಜನಸ್ಥಾನವೆನಿಸಿದುದು ||
ವ್ಯಾಜವಿಲ್ಲದೆ ತರಳರಿರ್ವರು |
ರಾಜಸುತರದಸಿಂತೆಸಗಿದರು |
ಸೋಜಿಗವು ನಿನಗರುಹದಿರ್ಪುದು ಬೇಹಿನವರಿದನು ||೭||

ಖರನ ಕೊಂದರು ದೂಷಣನ ಶಿರ |
ವರಿದರಾತ್ರಿಶಿರನ ಸಿರಂಗಳ |
ತರಿದರುಳಿದಾರಕ್ಕಸರ್ಕಳನೆಲ್ಲ ಸದೆಬಡಿದು ||
ಸುರರಿಪುಕ್ಷಯಕೃತಿಗೆ ವಿಘ್ನೇ |
ಶ್ವರನಪೂಜೆವೊಲೆನ್ನ ಭಂಗಿಸಿ |
ತರಳೆಯನು ಕೊಲಲಾಗದೆಂಬಾಧರ್ಮದಿಂದುಳುಹಿ ||೮||

ಬಿಟ್ಟರೆನ್ನೊರ್ಸ್ವಳನು ತಾನಹ ।
ಕೆಟ್ಟಕೇಡಸದಾರಿಗೊರೆಯಲಿ ।
ಹುಟ್ಟ ನಿನ್ನೊಡನೆನ್ನಮಾನವು ಬಟ್ಟಬಯಲಾಯ್ತು ॥
ದಿಟ್ಟರೆನಿಪವರಟ್ಟಹಾಸವ ।
ನಿಷ್ಟೆನುತ ನಿರ್ಣಯಿಸಲಸದಳ ।
ನಿಟ್ಟಸಲ್ನಿನಗಳಿವ ತರ್ಪರು ಕಟ್ಟಕಡೆಯೊಳಗೆ ॥೯॥

ನುಡಿಯು ಕೇಳ್ದೊಡನಿರದೆ ಕಿಡಿಗೊಂ ।
ಡೆಡೆಯುರಕ್ಕಸಗಡಣದೆದೆ ಗಡ ।
ಗಡನೆ ನಡುಗಲ್ಕೆದ್ದು ಕಡುಗವ ಜಡಿದು ಜಳಪಿಸುತೆ ।
ನುಡಿನುಡಿ ಸಹೋದರಿಯೆ ಮೃತ್ಯುವಿ ।
ನುಡಿಜೆರಗ ಜಾರಿಸಿದಕೊಬ್ಬಿನ ।
ಕಡುಹುಕಾರರದಾರು ತೊಡೆವೆನು ಬಾಳದಕ್ಕರವ ॥೧೦॥

ಎಲೆಲೊ ನರಗುರಿಗಳಿರ ನೀವೆ ।
ನ್ನಳವನರಿಯದೆ ಕೆಣಕಿ ಕೆಟ್ಟರಿ ।
ಫಲವನುಣ್ಣಿರಿ ಯೆನುತಲಸುರಾಧಿಪನು ಲಟಕಟಿಸೆ ॥
ಬಲುಭುಜನ ತಬ್ಬಿದಳು ತಡೆದಳು ।
ಚಲದಪರಿಯಿದು ಸಾಗದವರೊಳು ।
ನೆಲದ ಹುಳುನರರೆಂದು ಭಾವಿಸಬೇಡ ನೀನವರ ॥೧೧॥

ಕೇಳಿ ಬಲ್ಲೈ ನೀನಯೋಧ್ಯೆಯ |
ನಾಳುತಿರ್ದನ ದಶರಥೇಂದ್ರನ |
ಮೇಲೆನಿಪ ತನುಜಾತರೆಸೆವರು ರಾಮಲಕ್ಷ್ಮಣರು ||
ನೀಳವಾಗಿಹ ತೋಳು ಮೇಣ್ಸುವಿ |
ಶಾಲವಾಗಿಹಚಕ್ಷು ವಲ್ಕಲ |
ಚೇಲವಂಗಜರೂಪು ಶೋಭಾಕರವು ರಾಮನಿಗೆ ||೧೨||

ಧನುವ ಧರಿಯಿಸಿ ಕರದೊಳಾವಗ |
ಮನಲಕೀಲವನುಗುಳ್ವಬಾಣವ |
ನನುಗೊಳಿಸುತೆಚ್ಚರದೊಳಿರ್ಪನು ಶೂರರಘುವೀರ ||
ಅನಿಮಿಷರಿಗೀಕ್ಷಿಸುವೊಡರಿವಾ |
ಅನುಪಮನ ಕೈಚಳಕಮಿಷುಗಳ |
ನೆನಿತುವೇಗದೆ ತೆಗೆವಪೂಡುವನಿಸುವನೆಂಬುದಿದು ||೧೩||

ಏನನುಜ್ಞೆಯನೀವನಣ್ಣನು |
ತಾನದೆಲ್ಲನಿತುವನು ಮೀರದೆ |
ಮಾನಿಲಕ್ಷ್ಮಣನವನನೇ ನೆಳಲಂತೆ ಪೊದ್ದಿಹನು ||
ಮೀನಕೇತನನರಸಿಯನು ನುಸಿ |
ಗಾಣುವಾಕಡುರೂಪನೊಂದಿದ |
ಮಾನಿನೀಮಣಿಯೂರ್ವಳಿರ್ಪಳು ರಾಣಿ ರಾಮಂಗೆ ||೧೪||

ಇಂದುವನು ನಗುತಿಹುದು ವದನವು ।
ಬಂದುಗೆಯನಾತುಟಿಯು ಪಳವುದು ।
ಮಂದಗತಿಗಳುಕುತ್ತ ಮದಗಜಮಡವಿಗೈದಿದುವು ॥
ಸುಂದರಾಂಗಿಯ ನೇತ್ರಯುಗಮರ ।
ವಿಂದವನು ಸೋಲಿಪುದು ಸಂಪಗೆ ।
ಯಂದವನು ಕಡೆಗಣಿಸಿ ಮೆರೆವುದು ಲಲಿತನಾಸಿಕವು ॥೧೫॥

ಜನಕಭೂಪನ ಸುತೆಯು ಸೀತೆಯು ।
ಘನತರಮೆನಿಪ್ಪಸ್ವಯಂವರ ।
ದನುವನಾಲಿಸಿ ಪೋಗಿ ಮಿಥಿಲೆಗೆ ನೀನು ಪೂರ್ವದಲಿ ॥
ಧನುವನೆತ್ತದೆ ಭಗ್ನಮಾನಸ ।
ನೆನಿಸಿ ಹಿಂದಿರುಗಿದೆಗಡಾ ತ ।
ದ್ವನಿತೆಯೇ ತಾನಾಗಿಯೆಮ್ಮೆಡೆಗಿಂದು ಬಂದಿಹಳು ॥೧೬॥

ನಿನ್ನರೂಪಿಂಗವಳ ಚೆಲುವಿಕೆ ।
ಯನ್ನು ನಾನೊರೆಯಿಕ್ಕಿ ಸಮನೆಂ ।
ದುನ್ನತೋತ್ಸವದಿಂದಲವಳನು ಪಿಡಿಯಲನುವಾಗೆ ॥
ಕುನ್ನಿ ಘಡ ಹೋಗೆನುತ ಲಕ್ಷ್ಮಣ ।
ತನ್ನ ಸರಳಿಂದೆನ್ನನೀಪರಿ ।
ಬನ್ನಬಡಿಸಿದನಣ್ಣ ನಿನ್ನಿಂದೆನಗೆ ಪರಿಭವವು ॥೧೭॥

ಅಸುರರ ಸಕಲಾಯುಧಂಗಳ ।
ಸಾಸವಿವರೆೊಳ್ನಡೆಯದೆಂತುಟು ।
ವೇಸವನು ಮರೆಯಿಸುತೆ ಮುನಿಗಳತೆರದೆ ಬಂದಿಹರೊ ॥
ಲೇಸರಿದು ನೀನಂತುಟವರನು ।
ಮೋಸದಿಂದಲೆ ನಾಶಪಡಿಸುವ ।
ದೇಸಿಯೊಂದಿಹುದದನು ತಿಳಿಪ್ಪವೆ ಕೇಳು ಕೃಪೆದಾಳು ॥೧೮॥

ತರುಣಿಯಾ ನಡೆನುಡಿಗಳಿಗೆ ರಘು ।
ವರನು ಮೆಚ್ಚಿಹನವನ ಸುರುಚಿರ ।
ತರಗುಣಂಗಳಿಗಾಕೆ ಸೋತ್ತಿಹಳರ್ಪರೊಂದೆನಲು ॥
ಮೆರೆಯುವೆಣೆವಕ್ಕಿಗಳೊ ತಾವೆನ ।
ಲೆರಕಗೊಂಡಿಹರದರಿನವನಾ ।
ಸರಸಿಜಾಕ್ಷಿಯ ಜತೆಯು ತಪ್ಪಲು ಕೊರಗಿ ಸಾಯುವನು ॥೧೯॥

ಪೇಳುವೆನು ನಾನೊಂದುಪಾಯವ ।
ಕೇಳು ಮಾರೀಚನನು ಮಾವನ ।
ನೋಲಗಿಸಿಯೊಲಿಸುತ್ತ ಕಾರ್ಯವ ಸಾಧಿಪುದು ಮತವು ॥
ತಾಳ ಹೊಮ್ಮಿಗವರಿಜನವನಾ ।
ಬಾಲೆಯಿದಿರೊಳ್ಸುಳಿಯಲಾಕೆಯು ।
ತಾಳುತಾಸೆಯನದನು ಪಿಡಿಯೆನುತರಸನನು ಕಾಡೆ ॥೨೦॥

ಅಸಿಯುಳಿಷ್ಟವ ಸಲಿಸಬೇಕೆನು |
ತಸನುಶೂರನು ಪಿಡಿಯಲ್ಕೈತರ |
ಲೆಸೆದು ಬಳಿಯಲಿ ಸಿಕ್ಕಿತೆನಲುಸವಸದಿ ಲಂಘಿಸುತ ||
ಸಸಿನೆ ಮುಂದಕೆ ಪೌರುತಂತಂ |
ತಸದೃಶದ ಬೆಡಗಿಂದಲುರುಸಾ |
ಹಸದೊಳವನನು ಸೆಳೆದು ದೂರಕೆ ಸಾರ್ದು ತಾನಿರದೆ ||೨೧||

ತಮ್ಮಲಕ್ಷ್ಮಣ ಸೀತೆ ಹಾ ಎಂ |
ದುಮ್ಮಳಿಸುತಾರಾಮನಂದದೊ |
ಳೊಮ್ಮೆ ಕೂಗಲು ಕೇಳಿ ಲಕ್ಷ್ಮಣನಾಂತು ಕಳವಳವ ||
ಹಮ್ಮದಂಗೊಳುತೆದ್ದು ರಾಮನ |
ನೆಮ್ಮದಿಗೆ ಭಯಮೊದವಿತೆನ್ನುತ |
ಗಮ್ಮನಾದನಿವಿಡಿದು ತಾನಲ್ಲಿಂದ ತೆರಳುವನು ||೨೨||

ಕಡುಭರದಿ ನೀಂ ಯತಿಯ ವೇಷವ |
ಗಡಣಿಸುತಲಾಶ್ರಮವ ಪೊಕ್ಕು |
ಮಡದಿಯನು ಪಿಡಿತರ್ಪುದುಚಿತವಿದೆಂದು ಖಳೆ ನುಡಿಯೆ ||
ಒಡನೆ ತಂಗಿಯ ತಬ್ಬಿ ಮುದ್ದಿ |
ಟ್ಟಡಸಿದಾಪತ್ತಿನಲಿ ತನ್ನನು |
ಬಿಡದೆ ಸಲಹಿದೆ ತಾಯೆಯೆಂದೆನುತೆದ್ದನಸುರಪತಿ ||೨೩

ಆಗಳಾಜ್ಞೆಯನಿತ್ತು ರಥವನು |
ಬೇಗ ತರಿಸುತ್ತಡರಿದನು ಲೇ |
ಸಾಗಿ ದುರ್ವೃತ್ತಿಯನು ದೂರೀಕರಿಸಿ ವಿಪಿನದಲಿ ||
ಯೋಗಮಾರ್ಗದೊಳಿರ್ದು ಲೌಕಿಕ |
ರಾಗವೆಲ್ಲವ ನೀಗಿ ಶಿವಸಂ |
ಯೋಗಮಾನಸನಾದ ಮಾರೀಚನನು ತಾಂ ಸೇರಿ ||೨೪||

ರೋಗಮುಡಸಿಹುದೆನಗೆ ನೀಂ ನೆರ |
ವಾಗಿ ತಕ್ಕುದೆನಿಪ್ಪಮದ್ದನು |
ಬೇಗನಿತ್ತೋವೆಂದು ದೈನ್ಯವ ಬೀರಿ ಯಾಚಿಸಲು ||
ಆಗಮೋದಿತತತ್ವಪರನೀ |
ನಾಗುತೆನ್ನಿಂದಲ್ಪಮತಿಯಿಂ |
ದೀಗಳೇನನು ಪಡೆಯಲೈದಿದೆ ಯೆಂದನಾದನುಜ ||೨೫||

ಪೇಳಲೇನನು ಮಾವ ರಕ್ಕಸ |
ರೇಳಿಗೆಗೆ ಕಡುಭಂಗವೊದವಿತು |
ಕೀಳುತರದಾಹುಲುನರರು ಬಲುಗೂಳಿಯಾದರಲಾ ||
ಕೇಳದೊಡೆ ನಮ್ಮವರ ವಿಧಿಯನು |
ಬಾಳಬಹುದೇ ಧರೆಯೊಳಗೆ ಬ |
ಲ್ಲಾಳತನ ತಾನೆತ್ತಲಡಗಿತೊ ದಾನವರಕುಲದ ||೨೬||

ಬಂದಿಹರು ಸಾಕೇತಪುರವರ ।
ದಿಂದ ಭೂಪತಿದಶರಥೇಂದ್ರನ ।
ನಂದನರುಗಡ ರಾಮಲಕ್ಷ್ಮಣರೆಂಬಬಾಲಕರು ॥
ಚಂದಿರಾನನೆ ಸೀತೆ ಜತೆಯಲಿ ।
ಬಂದಿಹಳು ಗಡ ತರಳರವದಿರು ।
ಹೊಂದಿ ಮುನಿವೇಷವನು ಚರಿಪರುಗಡ ತಪೋವನದೆ ॥೧೭॥

ಅಲ್ಲಿ ಕಾವಲಿಗಿರಿಸಿದೆಮ್ಮಯ ।
ಬಲ್ಲಿದರು ಪದಿನಾಲ್ಕುಸಾಸಿರ ।
ಮಲ್ಲರೆನಿಸಿದಭಟರ ನಿಷ್ಕಾರಣದೆ ಕೊಲ್ಲುತಲಿ ॥
ಇಲ್ಲ ಸಮರಾಂಗಣದೆ ಸಮಭಟ ।
ರೆಲ್ಲಿಯುಂ ಖರದೂಷಣರಿಗೆಂ ।
ದೆಲ್ಲರಾಡುತ್ತಿರ್ದತನ್ನಯ ಸೋದರರ ಮುರಿದು ॥೧೮॥

ಲಲನೆಯರ ಸೌಭಾಗ್ಯಲಕ್ಷ್ಮಿಯ ।
ಚಲುವಿನರಗಿಳಿಶೂರ್ಪಣಖೆಯನು ।
ಕಲಹವಿಲ್ಲದೆಮೂಗುಕಿವಿಗಳನರಿದುಕಳುಹುತಲಿ
ನೆಲದೊಳೆನಗಾಚಂದ್ರಸೂರ್ಯರು ।
ನೆಲಸಿರುವಪರಿಯಂತ ಕೊರತೆಯ ।
ನಿಲಿಸಿದರು ಪಾಪಿಗಳು ತಮ್ಮಯ ಕೊಬ್ಬಿನುಬ್ಬಿನಲಿ ॥೧೯॥

ಮಾವ ನಿನ್ನಸಹಾಯಮಿರಲೀ ।
ರಾವಣಂಗಿದಿರಾರು ಲೋಕದೊ ।
ಳಾವಘನಪೌರುಷರು ಮಾನಿಸಪುಳುಗಳೆಂಬವರು ॥
ಸಾವು ಸಮನಿಸದಂತೆ ಸೀತಾ ।
ದೇವಿಯನು ಹಾರಿಸುವುಪಾಯವ ।
ಭಾವಿಸುತ ಮನದೊಳಗೆ ನಿನ್ನಯಬಳಿಗೆ ಬಂದಿಹೆನು ॥ ೩೦॥

ಆಲಿಸೈ ಮುನ್ನಾಸ್ವಯಂವರ ।
ಕಾಲದಲಿ ನೆರೆದಿರ್ದಪೃಥ್ವೀ ।
ಪಾಲರಿದಿರೊಳು ಹೆದೆಯನೇರಿಸುವಾಗ ಬಿಲ್ಗುದಿಗೆ ॥
ಲೋಲಲೋಚನೆಯಂದಚಂದದ ।
ಮೇಲೆ ತನ್ನಯಮನವು ಮೋಹಿಸಿ ।
ಕಾಲು ಜಾರಿದೊಡೆನ್ನನೀಕ್ಷಿಸಿ ನಕ್ಕಳೇಡಿಸುತೆ ॥ ೩೧॥

ಇಂದು ತಂಗಿಗೆ ಮಾನಭಂಗವು ।
ಬಂದುದೀಕೆಯದೆಸೆಯಿನಲ್ಲದೆ ।
ಸುಂದರಾಂಗಿಯನೊಂದಬೇಕೆಂಬಾಸೆ ತನಗಿಹುದು ॥
ಬಂದು ಮೂರಂತಿರಲಿ ಮಧ್ಯದ ।
ಕುಂದಿನಿಂದಲಿ ನಮ್ಮಕುಲವೇ ।
ಬೆಂದುದಿದಕೆಂದವಳನಪಹರಿಸುವುದೆ ಮುಖ್ಯಾರ್ತ್ತಿ ॥ ೩೨॥

ಅಸುರಮುನಿ ಕೇಳದಕುಪಾಯವ ।
ನುಸಿರುವೆನು ನೀನಲ್ಲದಿತರರಿ ।
ಗಸದಳವಿದೆಂದರಿದು ಯೋಜಿಸಿ ಬಂದೆನೊಲವಿನಲಿ ॥
ಹುಸಿಯದಂದದೊಳೀಯಭೀಷ್ಟವ ।
ನೆಸಗುತೆನ್ನನು ಸಲಹು ನೀನೆಂ ।
ದಸುರಪತಿ ಕುಲನಾಶಮಂತ್ರವನುಸಿರಿದನು ಖಳಗೆ ॥೩೩॥

ಬೆಚ್ಚಿದನು ಮಾರೀಚನಂದಿನ ।
ನಚ್ಚು ನೆನಪಿಗೆಬರಲು ರಾಮನ ॥
ಬಚ್ಚಣೆಯಬಾಣವದು ನೆಟ್ಟಂತಾಗೆ ಹೃದಯದಲಿ ।
ನುಚ್ಚುನೂರಾಯ್ತೆದೆಯು ಬಳಿಕಿರ ।
ದೆಚ್ಚರೊಂದುತೆ ರಾಮನೆಂಬಾ ।
ಕಿಚ್ಚು ಪಬ್ಬುತೆ ದನುಜವಂಶವ ಸುಟ್ಟಪೊಲು ಒಗೆದು ॥೩೪॥

ಬಂದನೇನ್ನೆ ದಾನವಾರಿಯು ।
ತಂದನೇನ್ನೆ ಮರಣದೋಲೆಯ ।
ನಂದಿತೇನ್ನೆ ದನುಜರೈಸಿರಿಯೆಂಬಪೆರ್ಜೋಡರು ॥
ಕಂದ ನಿನ್ನೀಬುದ್ಧಿಗಿಂದಿದ ।
ತಂದು ಚಾಜೆದಳೇನು ಪಾಪಿನಿ ।
ಮಂದಮತಿಚಲಗಾತಿ ಖಲರತಿಯುಸತಿಮೂಕೊರತಿ ॥೩೫॥

ರೂಪವತಿ ತಾನೆನ್ನುತವರೊಳು ।
ಪಾಪಕೃತ್ಯಕ್ಕೆಳಸಲಿಂತುವಿ ।
ರೂಪವೆಸಗಿದರಿವಳಗಲ್ಲದೆ ಬೇರೆ ಕಾಣಿಸದು ।
ಚಾಪಲದೆ ಪುರುಷರೊಳು ಕಪಟಾ ।
ಟೋಪವನು ನೆರೆತೋರ್ಪ ಪೆಣ್ಗಳ ।
ಗೀಪರಿಯ ಮದ್ದರೆದೊಡಲ್ಲದೆ ಬುದ್ಧಿ ತಾಂ ಬಹುದೆ ॥ ೩೬ ॥

ರಾಮಲಕ್ಷ್ಮಣರಾರು ತಾನಾ ।
ಭೂಮಿಸುತೆಯಾರೆಂಬುದನುನೀಂ ।
ಕಾಮವಶದಿಂ ಮನಕೆ ತಾರದೆ ಕೆಣಕಿ ಕೆಡಬೇಡ ॥
ಈಮಹೀಭಾರವನು ತಗ್ಗಿಪ ।
ನೇಮದಿಂದಿವರುದಯಿಸಿರ್ಪ ।
ದ್ಧಾಮಮಹಿಮನನಾದಿಪುರುಷನನಂತಲಕ್ಷ್ಮಿಯರು ॥ ೩೭ ॥

ಖಲರ ಮಲಿನಾಚರಣೆಗಳು ಭೂ ।
ತಲದೆ ವೃದ್ಧಿಯನೊಂದಲಾಗಳೆ ।
ಕೆಲಕೆ ನೂಕುತೆ ಮತ್ತೆ ಸನ್ಮಾರ್ಗವನು ನಿಲಿಸಲ್ಕೆ ।
ಜಲಜನಾಭನು ಹಲವುವೇಳೆಯೊ ।
ಳೊಲಿದು ಧರಣಿಯೊಳುದಿಸಿ ದುರುಳರ ।
ಕೊಲುವನೆಂಬರಿವೆತ್ತಲಡಗಿತು ನಿನ್ನ ಚಿತ್ತದಲಿ ॥ ೩೮ ॥

ಮಗುವು ರಾಘವನೆಂದುಪೇಕ್ಷಿಸಿ ।
ವಿಗಡವಿಶ್ವಾಮಿತ್ರನಾಶ್ರಮ ।
ಪುಗುತೆ ಪಿಂತೆ ಸುಬಾಹುಮಾನುಂ ಕಾಳಗವನೆಸಗೆ ॥
ಬಗೆಯುತೆಮ್ಮನು ತೃಣದವೋಲ್ಕಿರು ।
ನಗೆಯ ಪಸರಿಸುತಂಬೆರಡನಿಡೆ ।
ಲಗಲಿತಸು ತಮ್ಮನಿಗೆ ಕೆಡೆದೆನು ನಾನು ಕಡಲೊಳಗೆ ॥೩೯॥

ಇರಲು ನಿಜರೂಪಿನಲಿ ರಾಘವ ।
ಶರಕೆ ತುತ್ತಹೆನೆಂಬಭಯದಿಂ ।
ದುರುತಪಸ್ವಿಯ ಚರ್ಯೆಯಿಂದೀಬನದೆ ಜೀವಿಪೆನು ॥
ಅರಿಯಲಾಖರದೂಷಣಾದ್ಯರು ।
ಕಿರಿಯರೇ ಬಲದೊಳಗೆ ನೀನಿದ ।
ನರಿದರಿದು ಮೇಲ್ವಾಯ್ವುದುಚಿತವೆ ತಾಟಕಾರಿಯೊಳು ॥೪೦॥

ಕಾಮಶರಕೀಡಾಗಿ ಸೀತಾ ।
ಭಾಮಿನಿಯನುರೆ ಬಯಸಿ ಸುಜನ ।
ಪ್ರೇಮವಿರಹಿತನಾಗಿ ಧರ್ಮವಿದೂರನೆಂದೆನಿಸೆ ॥
ಭೂಮಿ ಹೇಸದೆ ಕೀರ್ತಿ ಮಾಸದೆ ।
ನಾಮವಳಿಯದೆ ಮೃತ್ಯುವೆಳೆಯದೆ ।
ರಾಮಬಾಣವು ನಿನ್ನಸದೆಯದೆ ಬಿಡುವುದೇಬರಿದೆ ॥೪೧॥

ಬೇಡಬೇಡಿಂತಹಕುಚೇಷ್ಟೆಯ |
ಮಾಡದಿರು ರಘುರಾಮನೊಡನಿಂ |
ತಾಡಿ ಕೆಟ್ಟರು ಮುನ್ನ ಹಲಬರು ದುರುಳತನದಿಂದ ||
ನೋಡುನೋಡುತ ಕೊಲುವಮಾರಿಯ |
ದಾಡೆಯುಲುಗುವರುಂಟೆ ನಿನ್ನನು |
ಬೇಡಿಕೊಂಬೆನು ಮರಳು ಪುರಕೆಂದಸುರಮುನಿ ನುಡಿದ ||೪೨||

ರೋಗಿಗೌಷಧ ಸೇರದಂದದಿ |

ಭೋಗಿಗುರೆ ತಪ ರುಚಿಸದಂದದಿ |
ಯೋಗಿಗಾಸಂಸಾರಲಂಪಟ ಸೊಗಸದಂದದಲಿ ||
ತಾಗಿದೊಡನೀಮಾತು ಕಿವಿಗಳ |
ಗಾಗ ರೋಷಜ್ವಾಲೆ ಕಿಡಿಯಿಡೆ |
ಬೇಗನೇಳುತ ಕಡುಗಗೊಂಡನು ಜಡಿದು ರಾವಣನು ||೪೩||

ಏನಿದೆಲವೋ ನಿನ್ನನುಡಿಗಳು |
ಭಾನುವಿನ ಮುಂದಂಧಕಾರವೆ |
ಶ್ಯೇನನಿದಿರೊಳು ಪಾರಿವಾಳವು ಸುಳದು ಜೀವಿಪ್ಪುದೆ ||
ಜೇನುಹುಟ್ಟನೊಳರಗಿ ನೊಣವೆ |
ತ್ರಾನುಮುಳಯುಲುಬಹುದೆ ತನಗಾ |
ಮಾನವರ ಪಡಿಗಟ್ಟಿ ನುಡಿವೆಯು ನಿಲಿಸು ನಾಲಗೆಯ ||೪೪||

ವೃದ್ಧನೆನ್ನುತ ನಿನ್ನಬಳಿಗಾಂ ।
ಪೊದ್ದಿದುದಕಲೆನಾಲಗೆಯು ವೊಳ ।
ಮುದ್ದ ಸಿಗುರಿತು ತನ್ನನಾರೆಂದರಿಯದೀಪರಿಯ ॥
ಬುದ್ಧಿವಾದವ ಪೇಳತೊಡಗಿದೆ ।
ಕ್ರುದ್ಧನಾಗುತ ನಿಂದೆನಾದೊಡೆ ।
ಯುದ್ಧರಂಗದೆ ಕಾಲರುದ್ರನು ಸದ್ದುದೋರುವನೆ ॥೪೫॥

ಇರಲಿ ನಿನ್ನಯ ಹಲುಬು ತನ್ನಯ ।
ಬರವಿಗುತ್ತರವೇನು ಸೀತಾ ।
ಹರಿಣರೂಪವನಾಂತು ಬರ್ಪೆಯೊ ಬಾರೆಯೋ ಪೇಳು ।
ಹರಣದಾಸೆಯುದಿರ್ದೊಡೆನ್ನೊಡ ।
ನಿರದೆ ಬರ್ಪುದು ತಪ್ಪಿದೊಡೆ ನಿ ।
ನ್ನುರಕೆ ಚಾಚುವೆ ಚಂದ್ರಹಾಸವನೆನುತ ಗರ್ಜಿಸಿದ ॥೪೬॥

ಕೇಳದೊಡನೆಯೆ ಭಯಪಯೋಧಿಯೊ ।
ಳಾಳಿದನು ಮೈಬೆಮರಿತಾಕ್ಷಣ ।
ಖೂಳನಿವನೊರೆದಂತೆ ನಡೆಸದೆ ಮಾಣನೆಂದೆನುತ ॥
ಕಾಲವೊದವಿತು ತನಗಮೀಕೇ ।
ಡಾಳಯಿಂದಸು ತೊಲಗದಿರದು ಕೃ ।
ಪಾಳುರಾಘವನಸ್ತ್ರಕಿದ ಬಲಿಯಾಗಲರ್ಪಿಪೆನು ॥೪೭॥

ದೂರಕೆಳೆದೊಯ್ಯುತ್ತಲವನನು ।
ಮೀರಿ ದಣಿಸಿದೊಡಿರದೆ ಕೋಪಿಸಿ ।
ಕೂರಲಗಿನಿಂದೆನ್ನ ಸಂಹರಿಸುವನು ರಾಘವನು ।
ಧಾರಿಣಿಯೊಳೀಸ್ಯೆಪು ಮತ್ತಿ ।
ನ್ನಾರಿಗಾದೊಡಮುಂಟೆ ಮುಕ್ತಿಯು ।
ನಾರಿ ಸೇರುವಳೆನಗೆ ತಾನೇ ಧನ್ಯನಹೆನೆಂದ ॥೪೮॥

ಅಳುಕಲೇಕಿನ್ನಿದಕೆನುತ ಮನ ।
ದೊಳಗೆ ನಿರ್ಧರಿಸುತ್ತದನುಜನು ।
ವಿಳಯರುದ್ರನತೆರದೆ ನಿಂದಿಹರಾವಣನ ನೋಡಿ ॥
ಎಲವೊಪಾಪಿಯೆ ನನ್ನನುಡಿಗಳು ।
ಫಲಿಸದಾದುವು ನಿನ್ನಚಿತ್ತದ ।
ಚಲವಬಿಡೆ ನೀನಾದುದಾಗಲಿ ಬರ್ಪೆನೆಂದೊರೆದು ॥೪೯॥

ತೆರಳುವಾಮಾರೀಚನನು ಖಳ ।
ರರಸನಾಗಳೆ ಕರೆದು ತನಗಿ ।
ನ್ನರಿಯು ಗೆಲುವುದು ಸುಲಭವಾದುದು ಮಾವರಥವೇರು ॥
ತರುಣಿಯನು ಕರೆತಂದು ಸಗ್ಗದ ।
ಪರಮಸೌಖ್ಯವನೊಂದೆನುತ್ತಲಿ ।
ಪರಸುತೆನ್ನೊಡನಿಂದು ಬಾರ್ರೈ ರಾಮನಾಶ್ರಮಕೆ ॥ ॥೫೦॥

ಒರೆಯುತೀಪರಿ ರಥವನೇರಿಸಿ ।
ಸುರವಿರೋಧಿಯುಮನದಭೀಷ್ಟವ ।
ಭರದೆ ಪಡೆಯುವೆನೆಂಬಸಂಭ್ರಮದಿಂದ ಪೊರಮಡುತ ॥
ಪರಿಪರಿಯೊಳೊಪ್ಪುತಿಹಪಟ್ಟಣ ।
ಗಿರಿವನಂಗಳ ದುರ್ಗನದಿಗಳ ।
ನಿರದೆ ಕಳೆಯುತ ದಂಡಕಾವನಮಧ್ಯದೇಶವನು ॥ ।೫೧।

ಸೇರಿ ಕದಳೀವನದ ಮಧ್ಯದೆ ।
ತೋರುತಿರ್ಪಾಶ್ರಮವನೊಂದನು ।
ದೂರದಿಂದಲೆ ಕಾಣುತಿದು ಪೊಸತಾಗಿತೋರುತಿದೆ ।
ತೇರನಿಲ್ಲಿಯೆ ನಿಲ್ಲಿಸೆಂದಾ ।
ಸಾರಥಿಗೆ ಸೂಚಿಸುತಲಿಳಿದನು ।
ನಾರುಮಡಿಯನು ಧರಿಸಿ ಮಾವನೊಳೆಂದನಸುರೇಂದ್ರ ॥ ೫೨ ॥

ಮಾವ ಕೇಳಯಾಶ್ರಮವು ಪರಿ ।
ಭಾವಿಸಲು ರಾಮನದು ನೀನೀ ।
ಠಾವಿನಲಿ ನಿನ್ನಖಿಲಸಾಮರ್ಥ್ಯವನು ತೋರಿಸುತ ॥
ಮೋವಿಗೆಳಸಿದಹೊಮ್ಮಿಗವೊ ಎಂ ।
ಬಾವಿಧದಿ ಮೋಹವನೆ ಪುಟ್ಟಿಸಿ ।
ಭೂವಲಯಕದ್ಭುತವ ತೋರುತ್ತೊಲಿಸು ಜಾನಕಿಯ ।೫೩।

ಬಳಿಕ ಮಿಕ್ಕಿನಕಾರ್ಯವೆಲ್ಲವು
ಸುಲಭವಾಗಿಯೆ ಸಿದ್ಧಿಸುವುದೈ ।
ಬಲುಹಿನಿಂ ಕರವೆಳೆಯೆ ಕಾಯುವು ತಾನೆ ಬಪ್ಪುದಲಾ ॥
ಪಲವುಬಗೆಯುನು ಮನಕೆ ತಾರದೆ ।
ಚೆಲುವರೂವನು ಬೇಗ ತಾಳೆಂ ।
ಬುಲಿವು ಹಿಂಜೆಕು ಮುಂಜೆತಂತಹ ಪುಲ್ಲೆಯುಪವನಕೆ ॥೫೪॥

ಸುಳಿದುದದು ತಾನಿತ್ತಲತ್ತಲು ।
ಮೆಲೆವನೆಯು ಸರಿಸದಲಿ ತೋರುತ ।
ಕೆಲಕೆಸಾರುತ ಬಳಕವುಗುಳ್ಳೈದುತ್ತ ನಿಲ್ಲುತಲಿ ॥
ಹಲವುಬಣ್ಣದೊಳ್ಳೈದೆರಂಜಿಸು ।
ತಲುಗದಕ್ಷಿಗಳಿಂದನೋಡುತ ।
ನಲಿಯುತೊಪ್ಪುವ ಸೊಬಗಬೀರಿತು ಕನಕಮೃಗವಂದು ॥೫೫॥

ಎನುತತರುಗಳೊಳರಸಿ ಪುಷ್ಪವ ।
ಮನಕೆ ಬಂದುದ ತಿರಿದು ಮುಡಿಲಲಿ ।
ಜನಕನಾತ್ಮಜೆ ತುಂಬುತೆಲೆವನೆಯಿದಿರಿನುಪವನದೆ ॥
ಮಿನುಗುತಿಹಕಾಂಚನಮಯಾಂಗದ ।
ಘನಮನೋಹರವಾದ ರೂಪಿಂ ।
ದನುಪಮಾನಮಿದೆನಿಪಮೃಗವನು ಕಂಡು ಮೋಹಿಸುತ ॥೫೬॥

ಏನಿದೆತ್ತಣಿನೈದಿತೆರಳೆಯು |
ಕಾನನದ ಮೃಗಪೋತಕೀಪರಿ |
ಕಾನಕಾಂಗಮಿದಮಮ ಸೋಜಗಮಲ್ತೆ ಪರಿಕಿಸಲು ||
ನಾನಿದನು ಪಡೆಯುತ್ತೆ ವಿಪಿನ |
ಗ್ಲಾನಿಯನು ಪರಿಹರಿಪೆನೆನುತಾ |
ಮಾನಿನೀಮಣಿ ಸಡಗರದಿ ಹೊದ್ದಿದಳು ವಲ್ಲಭನ ||೫೭||

ಮೆಲ್ಲನೈತಂದಿದಿರೆ ನಿಂದಿಹ |
ವಲ್ಲಭೆಯನೀಕ್ಷಿಸುತ ರಾಮನು |
ಪಲ್ಲವಾಧರೆ ನಿನ್ನ ಬರವಿಂಗೇನುಕಾರಣವು ||
ಇಲ್ಲದೇನುಂಬರಿದೆಬರ್ಪ್ಪವ |
ಳಲ್ಲ ನಿನ್ನಯ ಮನದಬಯಕೆಯ |
ನಲ್ಲಳೇ ನೀನುಡಿಯೆ ನಡೆಸುವೆನೆಂದನಾರಘುಜ ||೫೮||

ಇನಿಯನೊರೆದಿನಿವಾತನಾಲಿಸಿ |
ಘನಮನೋರಥಮಾಂತೆನೆನ್ನುತ |
ವನಿತೆ ನುಡಿದಳು ಕಾಂತ ಕೇಳಿಂದೆಮ್ಮವನದೆಡೆಗೆ ||
ಕನಕಮಯಮೆನೆ ಮೆರೆವತನುವಿನ |
ವಿನುತಹರಿಣನದೊಂದುಬಂದಿಹು |
ದೆನಗೆ ಮನದಭಿಲಾಷೆಯಿಹುದದನೊಂದಬೇಕೆಂದು ||೫೯||

ಎದ್ದು ನಡೆ ಬೇಗಿರದೆ ತೋರ್ವೆನು ।
ಮುದ್ದುಮಿಗವನು ನಿನಗೆ ಮೆಲ್ಲನೆ ।
ಸದ್ದುದೋರದೆ ಬಪ್ಪುದೆನ್ನೊಡನೆನುತ ಕೈವಿಡಿದು ॥
ಉದ್ದುರುಳುವನಿತರೊಳಗಾಮಿಗ ।
ವಿದ್ದತಾವನು ಸೇರಿ ರಮಣನೆ ।
ಕದ್ದುನನ್ನಯ ಮನವನಚ್ಚರಿಗೊಳಿಪಮಿಗವಿದೆಕೊ ॥೬೦॥

ಸದಯನಿನ್ನನುರಾಗರಸಕಾ ।
ಸ್ಪದವುನಾನಹುದಲ್ಲವೆಂಬುದ ।
ನಿಸರಿನರಿಯಲುಬಹುದು ನೀನಿಂದಿರದೆ ಸಾಹಸದೆ
ಚದುರತನವನು ತೋರಿ ಬಾಣದೆ ।
ಸದೆದು ನೋಯಿಸದಂತೆ ಪಿಡಿಯುತ ।
ಮುದದೆ ತಂದೆನಗೀಯೆ ಕಾಲವ ಕಳೆವೆನಿದರೊಡನೆ ॥೬೧

ಎಂದು ತನ್ನಯ ಮನದ ಕಾಂಕ್ಷೆಯ ।
ನಿಂದುಮುಖಿ ಬಿನ್ನೈಸಲಾರಘು ।
ನಂದನನು ಬಗೆ ತಣಿಯೆ ಮುದ್ದಿಸುತರಸಿ ಲಾಲಿಪುದು ॥
ಇಂದು ನಿನಗೀಬಣಗುಪುಲ್ಲೆಯ ।
ತಂದುಕೊಡೆ ಮತ್ಪ್ರೇಮಸಿಂಧುವ ।
ನೊಂದಿದಳತೆಯು ಪೂರ್ಣವಾಯಿತ್ತೆಂದು ಭಾವಿಪೆಯಾ ॥೬೨॥

ಸುಂದರಾಂಗಿಯೆ ನನಗೆನಿನ್ನೊಳ |
ಗೆಂದುಮಿರ್ಪೊಲ್ಮೆಯನುಪರಿಕಿಸೆ |
ಬಂದೊಡಾಕಸ್ಮಿಕದೆ ನಿನಗೊಂದೆಡರುನಾನೊಡನೆ ||
ಮಂದರಾದ್ರಿಯನಾದೊಡಂಕೀ |
ಳ್ತಂದುಜಲಧಿಯನಡುವೆಸಾಹಸ |
ದಿಂದಸೇತುವನಾದೊಡಂಬಂಧಿಸುತಸಲಹುವೆನು ||೬೩||

ಆಗ ನೀಂ ಸಂತುಷ್ಟೆಯಾಗನು |
ರಾಗದಾಳವದೆನ್ನೊಳಂತುಂಟೆ |
ರಾಘವನೆ ನಾನರಿದುದಿಲ್ಲೆಂದೆನುತತಕ್ಕೈಸೆ ||
ನಾಗವೇಣಿಯೆ ನನ್ನ ಜನುಮವ |
ದಾಗ ಸಾಫಲ್ಯವನು ಪಡೆಯುಲು |
ಭೋಗಿಶಯನನ ಪದವಿಯಾಂತನ ತೆರದಿ ಸುಖಿಸುವೆನು ||೬೪||

ಇರ್ದೊಡಿಲ್ಲಿಯೆ ರಮಣಿ ನೀಂ ನಿಮಿ |
ಷಾರ್ಧದಲಿತಂದೀವೆನೆನ್ನುತ |
ಸಾರ್ದುಲಕ್ಷ್ಮಣನೆಡೆಯನೆಲ್ಲವನವನೊಳದನರಿಪಿ ||
ಪೊರ್ದಿತೆನಗೀವ್ಯಸನವಾದೊಡ |
ಮಿರ್ದು ಬಳಿಯೊಳು ಸೀತೆಯನು ಬಲು |
ಬರ್ದಿನಿಂ ಕಾದಿಹುದು ನೀನೆಂದೆಚ್ಚರಿಸಲವನು ||೬೫||

ಏನಿದಚ್ಚರಿಯಣ್ಣ ನೀನಿದು ।
ಹೀನರಾಕ್ಷಸಮಾಯೆಯೆಂಬುದ ।
ನೇನುಮರಿಯದನಂತೆ ಭ್ರಾಂತಿಯನೊಂದಿ ಗಮಿಸುವುದು ॥
ಶ್ವಾನದೆಕ್ಕಲನೆರಳೆಯಂದವ ।
ನಾಸುತಾವಮಾಯಾವಿದನುಜವಿ ।
ತಾನವಾವಗಮಿಲ್ಲ ಚರಿಸುವುದೆಂದು ಕೇಳ್ದರಿಯ ॥೬೬॥

ಲೋಕದೊಳಗೀಪರಿಯಮೃಗವುವಿ
ಲೋಕಿಸುವೊಡಿಲ್ಲಾವದೆಸೆಯೊಳ ।
ಮೀಕುಟೀರದ ಬಳಿಯೊಳಂದುದ್ಭವಿಸಿದಂತಿಹುದು ॥
ಸೋಕಿ ಬೆರೆಯದೆ ಮಿಕ್ಕಮೃಗಗಳು ।
ನೂಕಿ ಬೆದರುತ ಚದರಿಪೋಪ್ಪವು ।
ಸಾಕು ಸಾಕಿದನರಿಯಬಾರದೆ ದೇವಕವಡೆಂದು ॥ ॥೬೭॥

ತಮ್ಮ ನೀನಾಡಿದುದು ಸತ್ಯವು ।
ಸಮ್ಮತವು ತನಗಾದೊಡಂಕೇ ।
ಳಮ್ಮರಸಿ ಬಯಸಿದೊಡೆ ನಾನದಕೊಪ್ಪಿದೆನುಬಳಿಕ ।
ಸುಮ್ಮನೇ ಕಳುಕುವುದು ಕೇಳೀ ।
ಹೊಮ್ಮಿಗವು ನಿಜಮಲ್ಲ ಶಿಳನೆಂ ।
ದೊಮ್ಮೆ ತೋರ್ದೊಡೆ ಕಡಿದು ಬಿಸುಡುವೆನೇಕೆ ಸಂಶಯವು ॥೬೮॥

ಅರಸಿಯಿಹಳೆಡೆವಿಡದೆ ಕಾಯ್ದಿರು ।
ಬರುವೆನತಿಶೀಘ್ರದಲಿ ತಾನೆಂ ।
ದರಸನಾಹರಿಣನನು ಬೆನ್ನಟ್ಟಲ್ಕೆ ಬಳಕಿರದೆ ।
ತರತರದ ನಟನೆಗಳ ತೋರು ।
ತ್ವರದೆ ಸಿಕ್ಕಿತುಸಿಕ್ಕಿತೆನಿಸುತೆ ।
ಭರದೆ ಮುಂದಕೆ ಜಿಮ್ಮಿ ನಿಲ್ಲುತ ನೋಡಿ ಪಿಂಗಡೆಗೆ ।।೬೯।।

ಬರುವನಿನ್ನೇಂ ಸರಿಸಕೆಂಬನಿ ।
ತರೊಳು ಜಾರುತ ಮರಳಿ ನಿಲ್ಲುತ ।
ಮರೆಯುದೀಪರಿಬವಣಿಗೊಳಗಾಗಿಸುತ ರಾಘವನ ।।
ಪರಿಪರಿಯ ಬಳಲಿಕೆಯನೀಯು ।
ತ್ವರದೆ ವನದಿಂ ವನಕೆ ಸಾರುತ ।
ಭರದಿನೊಯ್ದುದು ನೃಪನ ದೂರದೊಳುಳದುದಾಶ್ರಮವು ।।೭೦।।

ಜಲಜಸಖನಪದಾಬ್ಧಿಗಿಳಿವನು ।
ಹಲವುಪಾಯಗಳೆಲ್ಲ ತೀರ್ದುವು ।
ಹುಲುಮಿಗವು ಕೈಸೇರದಾಯುಸವಾಂತುದೆನ್ನೊಡಲು ।।
ತಿಳಿಯಲಿದು ಸಾಮಾನ್ಯವಾಗಿರ ।
ಬೆಳೆವನೆಯು ಬಹುದೂರವಾಯಿ ।
ತ್ತುಲಿದನಾಗಳೆ ತಮ್ಮ ತಾನಿದು ಕಪಟದ ಮೃಗವೆನುತ ।।೭೧।।

ಹಿರಿಯುಮಕ್ಕಳು ಪ್ರಷ್ಟಿಕಾಯರು ।
ಕಿರಿಯುವರು ಮೇಧಾವಿಗಳೆನು ।
ತ್ತೊರೆವನಾಳ್ನುಡಿ ಸತ್ಯವಾದುದು ನಮ್ಮವಿಷಯುವಲಿ ॥
ಅರಿಯುದೀದ್ವೈತಂದಬಳಿಕಿ ।
ನ್ನಿರುವುದೇನೀಖೂಳಮಿಗವನು ।
ತರಿದು ಚರ್ಮವ ಕೊಯ್ದುತನ್ನಯುರಮಣಿಗಿತ್ತಪೆನು ॥ ೨೦ ॥

ಎನುತ ಧನುವಿಂಗಾಗ ಬಾಣವ ।
ನನುಗೊಳಸುತೆಸೆಯಲ್ಕೆ ಹರಿಣನು
ದನುಜರೂಪದೆ ಲಕ್ಷ್ಮಣನೆ ಹಾ ಸೀತೆ ಹಾ ಎನುತ ॥
ವನಮದೆಲ್ಲವು ಮೊಳಗುವಂದದೊ ।
ಳನಕುಲೇಶನ ಕೊರಲದನಿಯುನೆ ।
ಅನುಕರಿಸಿ ಮಿಗೆ ಕೂಗುತಸುವನು ಬಿಟ್ಟುದಾಕ್ಷಣವೆ ॥ ೨೨ ॥

ದುಗುಡವಾಂತನು ರಾಮನಾಗಳು ।
ವಿಗಡರಕ್ಕಸಮಾಯ ಬಲ್ಲಿತು ।
ಪ್ರಗದೆ ಬಿಡದೀನುಡಿಯು ಸೀತಾಲಕ್ಷ್ಮಣರ ಕಿವಿಗೆ ॥
ಬಗೆಬಗೆಯು ಬಗೆಗಳನು ಕಲ್ಪಿಸಿ ।
ಹಗರಣವನೇಂತಹರೊ ಕಾಣೆನು ।
ಮಗುವಲಾ ಸೌಮಿತ್ರಿಯೆಂದಾರಾಮನಳುಕಿವನು ॥ ೨೪ ॥

ತಾಳಲಾರೆನು ಹರಣದೆರೆಯನು ।
ವೇಳೆಗಳೆವನದೇತಕರಿಯೆನು ।
ಪೊಳುಮೃಗದಿಂದೇನು ಬಿಸುಟದನೇಕೆ ಬಾರನೊ ಹಾ ॥
ಕಾಳುಮೂಳನೆ ಬಯಸೆ ಗದರಿಸಿ ।
ಪೇಳಲಾರದೆ ಬುದ್ಧಿಯನು ತನ।
ಗಾಳುಗೆಲಸಕೆ ತೆತ್ತು ದೇಹವನೇಕೆ ದಣಿಸುವನೋ ॥ ॥೭೫॥

ಹರಿಣನಿಲ್ಲಿಗೆ ಬರಲದೇತಕೆ ।
ಯಿರದೆನಾನದಬಯಸಲೇತಕೆ ।
ತರುವೆನೆನುತಲಿ ತೆರಳಲೇತಕೆ ರಮಣನೇನಹನೊ ॥
ಅರಿಯದೊಂದುಮನಕೆರಮಣನ ।
ಬರವಿಗೇತಕೆ ತಡವೆನುತ್ತಾ ।
ತರುಣಿ ಮಿಗೆ ಚಿಂತಿಸುವಸಮಯಕೆ ಕೇಳ್ದದಾದದನಿಯು ॥೭೬॥

ಬಿದ್ದುದೇನೀಗೆನ್ನಕಿವಿಯೊಳು ॥
ಸದ್ದು ರಾಮನದಾಗದಿರದಿದು ।
ವದ್ದಿಪೋದುದೆ ಧರಣಿ ತಾನಕಟಬ್ಧಿಯೊಳಗಿಂದು ।
ಬಿದ್ದರೋಭೂಮಿಗೆಶವೀಂದುಗ ।
ಳುದ್ದವಹಸುರಮಾರ್ಗದಿಂಮೋಗ್ ।
ಕದ್ದುದೋವಿಧಿತನ್ನಮಂಗಳಸೂತ್ರದೈಸಿರಿಯ ॥ ೭೭॥

ಏನಿದಿಂತಾಯ್ತೆಂದು ಮೈದುನ ।
ನೀನು ಕೇಳೆಯ ರಾಘುವೇಶನ ।
ದೀನತಾಲಾಪವನು ಕೇಳಯುಮಿನ್ನು ಜೀವಿಸೆಯ ॥
ನಾನುಭೂಮಿಜೆಜಡತೆಯಾಂತವ ।
ಳೇನಬಲ್ಲೆನುಕಷ್ಟವನುಕೇಳ್ ।
ನೀನಭಿಜ್ಞತೆಯಾಂತಮಾನವನಾಗಿಜೆಂತಿಸೆಯಾ ॥ ॥೭೮॥

ಪೋಗುಪೋಗೈ ಲಕ್ಷ್ಮಣನೆ ನಿನ ।
ಗೀಗವೇಳೆಯೆ ಯೋಚನೆಗೆ ನಡೆ ।
ಜೇಗನಿಲ್ಲದಿರಾರ‍್ಯಪುತ್ರಗೆ ಜೀವಸಂಶಯವು ॥
ಆಗುಹೋಗೇನೆಂಬುದರಿಯದೆ ।
ಬಾಗಿಸಿದಶಿರದಿಂದ ಮುಂಗಡೆ ।
ಕೈಗಳನು ಮುಗಿಯುತ್ತ ನಿಂದಿಹುದಕ್ಕೆ ಸಮಯವಿದೆ ॥೭೯॥

ಏನಿದೇಸೀನಡತೆ ತಕ್ಕುದೆ ।
ನಾನಳಲಿ ನಿಂದೊರಲುತಿರ್ದರು ।
ಹಾನಿಮಾನದಮಾನವನ ತೆರದಿಂದ ವರ್ತಿಸುವೆ ॥
ಮಾನವೇ ನಿಮ್ಮಣ್ಣನಾಪದ ।
ವಾಸುತಿರೆ ನಿನಗೆಚ್ಚ ಳವೆಫಡ ।
ನೀನುನಿಲ್ಲದೆತೊಲಗುತೊಲಗೆಂದುಲಿದಳಾಸೀತೆ ॥ ॥೮೦॥

ಕೇಳುತಾರ್ತಧ್ವನಿಯ ಲಕ್ಷ್ಮಣ ।
ನಾಲಿಯಲಿ ನೀರ್ದುಂಬಿ ಸಂಶಯ ।
ಜಾಲದಲಿಮನಸಿಲುಕಲೇನುಮನರಿಯದರೆಗಳಗೆ ॥
ಮೇಲೆ ನಿಶ್ಚೈಸುತ್ತ ರಾಕ್ಷಸ ।
ಜಾಲವಲ್ಲದೆ ಕಾಣೆ ಲಕ್ಷ್ಮೀ ।
ಲೋಲನಸುವಿಂಗುಂಟೆ ಕೊರತೆಯು ಸತ್ಯವೆಂದೆನುತ ॥೮೧॥

ಧರಣಿಜಾತೆಯ ನಿಷ್ಠುರೋಕ್ತಿಯ ।
ಸರಕುಗೈಯದೆ ದೇವಿ ಕೇಳ್ವುದು ।
ಸರಸಿರುಹಭವತಾತಗಳವುಂಟೆಂಬರೇ ತಾಯೆ ॥
ಧರಣಿ ಮೇಣೀಚಂದ್ರಸೂರ್ಯರು ।
ಮೆರೆವನಕ್ಷತ್ರಾದಿಗಳು ವಿಧಿ ।
ವಿರಚಿತಾಂಡವಿದೆಲ್ಲ ಲಯಿಸಿಯು ನಾಶವಿಲ್ಲವಗೆ ॥೮೨॥

ತಾಯೆ ನೀವೇ ರಮೆಯು ನಿಮ್ಮಯ ।
ನಾಯಕನೆ ಲಕ್ಷ್ಮೀಶನಿಂತಿರ ।
ಲಾಯತವೆ ನಿಮಗಿನಿತುಮರವೆಯು ದನುಜಮಾಯೆಯಿದು ।
ರಾಯರಾಘವನನ್ನು ತೋರ್ಪೆನು ।
ನೋಯಲಾಗದು ಮನದೆ ನಿಖಿಲಾ ।
ಮ್ನಾಯಮೂರ್ತಿಯ ಕಾಂಬಿರಿನ್ನರಗಳಗೆಯೊಳಗೆನಲು ॥೮೩॥

ಅರಸನಳಲಿಂ ಕುದಿದು ಬೇಯುವ ।
ಪರಮಸಾಧ್ವಿಯ ಮನಕೆ ರುಚಿಪ್ಪುದೆ ।
ಪೆರರು ಪೇಳುವನೀತಿವಚನವು ಕೇಳುತಾಕ್ಷಣದಿ ॥
ಕೆರಳದಳು ಲಲಿತಾಂಗಿ ನಿನ್ನಯು ।
ಪರಿಯೆ ಮತ್ತೊಂದಾಗಿ ತೋರ್ಪುದು ॥
ಪರಿದುದಾಮೊದಲಿದ್ದಭಕ್ತಿಯು ನಮ್ಮೊಳೆಲೊ ನಿನಗೆ ॥೮೪॥

ತರುಣಿಯನು ರಕ್ಷಿಸುವುದೆನುತೊರೆ ।
ದಿರಿಸಿ ಪೋಗಲು ನಿನ್ನನವನಿಪ ।
ನೆರಡನೆಣಿಸುವೆಯೇನೊ ಪಾಪಿಯೆ ನಿನ್ನ ನುರೆಸುಡಲಿ ॥
ಹರಣದೆರೆಯಂಗೊದಗಲಾಪ ।
ತ್ತರಿದರಿದು ಜೀವಿಪೆನೆ ತಾನಿ ।
ನ್ನಿರಲುವೂರೆನು ತೊರೆವೆನಸುವನೆನುತ್ತ ಸಡಗರಿಸಿ ॥೮೫॥

ಸೆರಗನೆಳೆದದನಾಗ ಹೊಸೆಯುತ ।
ಕೊರಳ ಸರಿಸಕೆ ಕೊಂಡುಪೋಗಲು ।
ಭರದೆ ಲಕ್ಷ್ಮಣ ಬೇಡಬೇಡೆಂದೆರಗಿ ಪದಯುಗಕೆ ॥
ದುರುಳದನುಜರು ನಿಮಗಪಾಯವ ।
ನಿರದೆ ಹವಣಿಪರಾನುಪೋಗಲು ।
ತೆರಳುವೆನು ತಾನಾದುದಾಗಲೆನುತ್ತ ಪೊರಮಡುತ ॥೮೬॥

ಶಿವಶಿವೇನಿಂತಾದುದೀಗಲು ।
ಭುವನಮಾತೆಯ ಬುದ್ಧಿಗಂಧತೆ ।
ಕವಿಯಿತೆನಲಿನ್ನುಳಿದಪೆಣ್ಗಳನೆಂದು ಫಲವೇನು ॥
ನವೆದನಿವನೆಮಗಾಗಿ ಯೆಂಬುದ ।
ಲವವನಾದರು ಮನಕೆ ತಾರದೆ ।
ಕಿವಿಗೆ ಸಲ್ಲದಮಾತನಾಡುತ್ತೆನ್ನನಟ್ಟಿದಳು ॥೮೭

ನಾರಿಯರು ಕಡುಮೂರ್ಖೆಯರೆನುತ ।
ಸಾರುತಿರ್ಪುವು ನೀತಿವಚನಗ ।
ಳಾರಯಿದು ನೋಡಲ್ಕೆ ನುಡಿವುವು ಸತ್ಯವನೆ ತಾವು ॥
ದೂರದೃಷ್ಟಿಯೊಳಪ್ಪಸುಖವೇ ।
ಸಾರವೆಂಬುದನರಿಯದಾಕ್ಷಣ ।
ತೋರುತಡಗುವಸುಖವೆ ಸಾರವದೆನುತ ನಂಬುವರು ।೮೮॥

ಆವವಂಶವೆ ಕೆಡಲಿ ಇವರಿಂ।
ದಾವನುರುತರಕೀರ್ತಿಯುಳಿಯಲಿ ।
ತಾವದೇನಪದೆಸೆಯನಾನಲಿ ಪಿಡಿದಚಲವನ್ನು ॥
ಆವುದೊಂದನು ನೋಡದಮಮಾ ।
ಭಾವಕೇಪರಿತೋರ್ದುದದೆ ಸಂ ।
ಭಾವಿತವು ತಾನೆಂದು ಸಾಧಿಪಯತ್ನಗೈದಪರು ॥೮೯॥

ಎಂದು ಲಕ್ಷ್ಮಣ ಮನದೆ ಯೋಚಿಸು
ತಂದು ಮುಂದಕೆ ನಡೆಯುತಲ್ಲಿಯೆ ।
ನಿಂದು ಪಿಂದಕೆ ತಿರುಗಿ ನೋಡುತ ಸುಯ್ದು ಸೀವರಿಸಿ ॥
ಬಂದುದೆಲ್ಲವು ಬರಲಿ ತಾಪಡೆ
ತಂದುದನು ಮತ್ತಾವನುಂಡಪ ।
ನಿಂದು ತಾನಿಲ್ಲಿಹುದು ಮತವಲ್ಲೆನುತ ತೆರಳಿದನು ॥೯೦॥

ಅತ್ತ ಲಕ್ಷ್ಮಣನಂತು ತೆರಳ ।
ಲ್ಕಿತ್ತ ರಾವಣನಿದುವೆ ಸಮಯವೆ ।
ನುತ್ತ ಭೂಮಿಜೆಯಿರ್ಪಪರ್ಣಾಗಾರದೆಡೆಗೈದಿ ॥
ಚಿತ್ತವೂವಳೊಳೀಸುದಿನ ನೆಲ ।
ಸಿತ್ತೊ ತಾನಾಸುಂದರಾಂಗಿಯ ।
ನೆತ್ತಿಮುದ್ದಿಟ್ಟೊತ್ತುತಾಲಿಂಗಿಸುವೆನೆಂದೆನುತ ॥೯೧॥

ಉಟ್ಟಕಾಷಾಯಾಂಬರದ ಪಣೆ ।
ಗಿಟ್ಟಸಿತಭಸಿತತ್ರಿಪುಂಡ್ರದ ।
ದಿಟ್ಟಿಯನು ಸೆರೆಗೈವಭಸ್ಮವ ಧರಿಸಿದವಯವದ ॥
ಜಟ್ಟಿಮುನಿಯಿವನಾವನೆಂಬವೊ ।
ಲಟ್ಟಹಾಸದೆ ಜಗ್ಗುವಡಿಗಳ ।
ನಿಟ್ಟು ರಾಮನ ಪಟ್ಟದರಸಿಯ ಮುಟ್ಟುವಾಸೆಯಲಿ ॥ ॥೯೨॥

ಬಂದು ಬಾಗಿಲಬಳಿಗೆ ನಿಂದವ ।
ನೆಂದನಾರೌ ಗೃಹದೆ ಭಿಕ್ಷುವ ।
ತಂದು ನೀಡುವುವತಿಥಿಗೊಲಿದಪನಿಂದುಧರನಿಂದು ॥
ಎಂದುನುಡಿವಾಕಪಟವೇಷಿಯು ।
ನೆಂದು ರಕ್ಕಸನೆಂಬುದರಿಯದೆ ।
ವಂದಿಸುತ್ತರ್ಘ್ಯಾದಿಸತ್ಕಾರಗಳನಿರದೆಸಗಿ ॥ ॥೯೩॥

ಬಳಿಯೊಳವನತೆಯಾಗಿ ಕಾಂತನು ।
ಬಳಿಯೊಳಿಲ್ಲದುದಕ್ಕೆ ಚಿಂತಿಸು ।
ತಳುಕುತವನೈತರುವಮಾರ್ಗವ ಬಿಡದೆ ನೋಡುತಿಹ ॥
ಲಲನೆಯನು ಕಾಣುತ್ತ ಮನುಮತ ।
ನಲಗಿನಿಂ ಕಡುನೊಂದ ಹೃದಯದ ।
ಖಳಶಿರೋಮಣಿಯಾಗ ಕೇಳದನಾಪತಿವ್ರತೆಯು ॥ ॥೯೪॥

ಚೆಲುವೆ ನೀನಾರಾರ ಕುವರಿಯು ।
ತಿಳಿಪದಾವನು ನಿನ್ನರಮಣನು ।
ಬಲಸಮನ್ವಿತರಸುರರಿರ್ಪೆಡೆಗೇತಕ್ಕೈದಿದಿರಿ ॥
ಜಲಜಭವಸೃಷ್ಟಿಯಲಿ ಪಲಬರ ।
ನಲಘುಲಾವಣ್ಯಾಂಗನೆಯರನು ।
ಬಳಿಸಿ ಬಲ್ಲೆನು ಕಾಣೆ ನಿನ್ನಯರೂಪಿಗಿನ್ನೆಣೆಯು ॥ ॥೯೫॥

ಮಾನಿನೀಮಣಿಯಿದನು ನಂಬೆನ ।
ಲೇನಿದಕಟವರಿಂತುನುಡಿವರ ।
ಧ್ಯಾನನಿಷ್ಠರಿಗೇಕೆ ಯುವತಿಯರಂದ ಚಂದಗಳು ॥
ಮಾನವೇಶನದೇಕೆ ಬಾರದೆ ।
ತಾನಿನಿತ್ತು ವಿಲಂಬವೆಸಗಿದ ।
ನೀನವೀನನ ಬರವು ಮನಕುರುಭಯವನಿತ್ತಪುದು ॥೯೬॥

ಕಾಲಹರಣವನೆಸಗುತಿರಲಾ ।
ಭೂಲಲಾಮರು ಬರುವರವರೀ ।
ಯಾಳನಾಟಕೆ ತಕ್ಕುಪಾಯವ ತಾವೆ ಹವಣಿಪರು ॥
ಕೇಳದೀತನ ನುಡಿಗೆ ಮರುನುಡಿ ।
ವೇಳತೊಡಗುವೆನೀಗಳೆನುತಾ ।
ಲೋಲಲೋಚನೆಯಾಗಳೊರೆದಳು ತನ್ನ ಸಂಗತಿಯ ॥೯೭॥

ಯತಿಯೆ ಕೇಳ್ಳೈ ನಾನು ಪೆರರವಾ ।
ಮಿಥಿಲೆಯಾಣ್ಮನ ಜನಕಭೂಪನ ।
ಸುತೆಯು ತನ್ನನು ಕರೆದಪರು ಸೀತಾಭಿಧಾನದಲಿ ॥
ಕ್ಷಿತಿಪದಶರಥಸಾರ್ವಭೌಮನ
ಸುತನು ಸುಯಶೋಸ್ವಿತನು ರಾಮನು ।
ಪತಿಯು ತನಗವನೆಸೆವಯೋಧ್ಯೆಯ ರಾಜ್ಯಭಾರವನು ॥೯೮॥

ಪಿತನ ಸತ್ಯೋದ್ಧಾರಕೋಸುಗ ।
ಜತೆಯೊಳುದಿಸಿದಭರತಗೊಲಿದಿ ।
ತ್ತತಿಭಯಂಕರವಿಪಿನದೊಳ್ಪದಿನಾಲ್ಕುವತ್ಸರವ ॥
ಹಿತದೆ ಕಳೆಯಲ್ಕಹಹ ಬಂದಿಹ ।
ನತಿಪರಾಕ್ರಮಶಾಲಿ ಸುಗುಣಾ ।
ನ್ವಿತನು ಸೋದರವರ್ಯಲಕ್ಷ್ಮಣಸಹಿತ ಸನ್ನೊಡನೆ ॥೯೯॥

ಅರಸುರಾಮನು ಸುಪ್ರಸಿದ್ಧನು ।
ಪರಮಶಿಷ್ಟನು ಸತ್ಯಸಂಧನು ।
ಸರಸನತಿಶುಚಿ ಬಹುದಯಾಪರನುರುಗುಣಾರ್ಣವನು ॥
ಸುರನರೋರಗದನುಜರೊಗ್ಗಾ ।
ಗೆರೆಯುನೊಳ್ಪ್ರತಿಭಟಿಸಿ ನಿಲ್ಲಲು ।
ಧುರದೊಳವರರೆಗಳಗೆಯುಳಿಯರು ಕೇಳು ಪೌರುಷವ ॥೧೦೦॥

ಧರಣಿಯೊಳಗಣ ಸಾರ್ವಭೌಮರ ।
ನೆರವಿ ಸೇರಿದುದಾಸ್ವಯಂವರ ।
ವರಮಹಾಮಂಟಪದೆ ತನ್ನನು ವರಿಸುವಾದಿನದೆ ॥
ಹರನ ಧನುವನು ಸೆಳೆದು ನಾರಿಯ ।
ಕೊರಲಿಗೇರಿಸಿ ಮೆರೆವನಾರಿಯ ।
ಕೊರಲಿಗನುಗೊಳಿಸುವುದು ತಾಳಯನೆನುತ ಮತ್ಪಿತನು ॥೧೦೧॥

ಸಾರಲಿರದಾನೃಪರು ಚಾಪಕೆ ।
ದೂರದಿಂ ನಮಿಸುತ್ತ ಸಾಗದೆ ।
ಮೋರೆಗಳ ಜೋಲಿಡುತ ನಿಂದಿರೆ ಕಂಡು ರಾವಣನು ॥
ತೋರುವೆನು ಪೌರುಷವನೆನುತಲಿ ।
ಮೀರಿ ಬಗ್ಗಿಸೆಯೊದೆಯಲದು ಕಾ ।
ಲ್ಜಾರಿ ಬೀಳಲ್ನಗೆಯೊಳದ್ದುದು ನೆರೆದ ನೃಪನಿಕರ ॥೧೦೩॥

ಎದ್ದನಾಗೆನ್ನರಸರಾಮನು ।
ಸದ್ದು ನಿಂದುದು ರಾಜಸಭೆಯಲಿ ।
ಹೊದ್ದಿದನು ಶಿವಧನುವನೆಡಗೈಯಿಂದ ಪಿಡಿದದನು ॥
ತಿದ್ದಿ ನಾರಿಯನೊತ್ತಿ ಬಾಗಿಸೆ ।
ಬಿದ್ದುದಿಳೆಗೆರಡಾಗಿ ಮುರಿದಂ ।
ದಿದ್ದರೆಲ್ಲರು ಪಟದಬೊಂಬೆಗಳಂತೆ ಬೆರಗಿನಲಿ ॥೧೦೪॥

ಇನಿತುಸತ್ವದೆ ಮೆರೆವಕಾಂತನ ।
ಘನಪರಾಕ್ರಮವರಿಯದಿಲ್ಲಿಯ ।
ದನುಜರಿದಿರಿಸಿ ಹರಣವಿತ್ತರವೋಘುಶರಗಳಿಗೆ ॥
ವಿನಯಿ ನೀನಾರಿತ್ತಬರವೇ ।
ನೆನಗೆ ಪೇಳುವುದೆನುತಲುಸುರುವ ।
ವನಿತೆಯಾನುಡಿಗೇಳಿ ರಾವಣನಾಗ ನಗುತೆಂದ ॥೧೦೫॥

ಹೇಳತೊಡಗಲೊ ತನ್ನಚರಿತೆಯು ।
ಕೇಳುತದ ನೀಂ ಸುಮ್ಮನಿರ್ಪೆಯ ।
ಕಾಳುಮನುಜನ ರಾಮನೆಂಬನ ಕೂಟ ಬೇಡೆನೆಯು ॥
ಪಾಳುಮನೆಯೊಳಗುರಿವದೀಪದ ।
ವೋಲು ನಿನ್ನೀರೂಪು ವಿಫಲವು ।
ಬಾಲೆ ನಿನಗನುರೂಪನೇನಾಮಾನವಾಧಮನು ॥೧೦೬॥

ದೇವದಾನವಯಕ್ಷಕಿನ್ನರ ।
ರಾವಗಂ ನೆರೆ ಸೇವಿಸುತ್ತಿಹ ।
ರಾವನಂ ತಾನಾವನಮರಾವತಿಯನೇಳಿಸುವ ॥
ಶ್ರೀವಿಯಿಂ ರಾಜಿಸುವಲಂಕೆಗೆ ।
ದೇವನೆನಿಪನೊ ಮೂರುಲೋಕವ ।
ಕಾವನಾದಿತಿಜಪತಿಯೀಯತಿಯೆನುತ ತಿಳಿ ಯುವತಿ ॥೧೦೭॥

ತನ್ನ ನಾಮವ ಕೇಳದೊಡನೆಯೆ ।
ಖಿನ್ನರಪ್ಪರು ದಿಕ್ಪತಿಗಳೆನ ।
ಲಿನ್ನುಳಿದಹಾಹೆಗಳ ಪಾಡೇಂ ತೆಗೆ ನರಾಧಮರ ॥
ಮುನ್ನ ಗೈದಿಹತಪದ ಫಲದಿಂ ।
ದೆನ್ನರಾಣಿಯರೆನಿಸಿ ಲೋಕದ ।
ಮನ್ನಣೆಗೆ ಗುರಿಯೆನಿಸಿಕೊಂಡರು ಹಲವುಕನ್ನೆಯರು ॥೧೦೮॥

ಇಲ್ಲ ಕೇಳ್ಸರಿ ತನ್ನವೈಭವ ।
ಕಿಲ್ಲವಾಸಟ ಬಾಹುಬಲಕಿ ।
ನ್ನಿಲ್ಲವಿಂದೆನ್ನಾಜ್ಞೆಗುಲ್ಲಂಘನೆಯು ಮೂಜಗದೆ ॥
ಬಲ್ಲತನಕೆಣೆಯಿಲ್ಲವಿದ್ಯೆಗ ।
ಳೆಲ್ಲವಡಗಿಹುವೆನ್ನವೊಗದೊಳೆ ।
ನಲ್ಲಳೇ ನೀನಿನ್ನು ಮನವೊಲಿದೆನ್ನ ವರಿಸುವುದು ॥೧೦೯॥

ಅರಸಿಯರ ತನ್ನವರ ನಿನ್ನಯ ।
ಪರಿಚರಿಯಕಿರಿಸುವೆನು ಕೇಳೆ ।
ನ್ನರಮನೆಯುಮೆನ್ನೈಸಿರಿಯು ನಿನ್ನದು ವಿಚಾರಿಸಲು ॥
ಹಿರಿಯಮಗನೆನಿಸಿದೊಡಮವನಿಯ ।
ಸಿರಿಯನೀಯದೆ ಜನಕನಟ್ಟಲು ।
ಗಿರಿವನಂಗಳ ಸೇರಿ ಜೀವಿಪ ತಿರುಕನಲೆ ರಾಮ ॥೧೧೦॥

ಹರಿತವಾದಲಗುಗಳು ನಾಂಟದ ।
ಪರುಷವಾಗಿಹಹೃದಯವಿದು ಸುಮ ।
ಶರಕೆ ಪಕ್ಕಾದುದನು ನೋಡಲು ನಿನ್ನಮಹಿಮೆ ಕಣಾ ॥
ವಿರಹದಾವಾನಲನ ಪೆರ್ಚಿಸಿ ।
ಕರಗಿಸುತಲೆನ್ನೆದೆಯ ನೀರೆನ ।
ಲರಲ ಸರಳಿಂಗೆಡೆಯ ಮಾಡಿದೆಯಲ್ತೆ ನೀನಿಂದು ॥೧೧೧॥

ಎಂದು ನುಡಿವಾದಶಮುಖನ ಪೂ ।
ರ್ಣೇಂದುಮುಖಿ ನೋಡುತ್ತ ಭೀತಿಯ ।
ನೊಂದಿ ಮನದಲಿ ಬೆಚ್ಚಿ ಬೆದರುತ ನಡುಗಿ ಕಳವಳಿಸಿ ॥
ಮುಂದೆ ಯುಗಲಿದಪ್ರಲ್ಲೆ ಬಲೆಯೊಳ ।
ಗೊಂದೆ ಸಿಲುಕುತ ಹೊಲಬುಗಾಣದೆ ।
ನೊಂದು ನಾನಾದೆಸೆಯನೀಕ್ಷಿಪಚಂದದಿಂದಿರದೆ ॥೧೧೨॥

ಹಿಂದೆಮುಂದಿಕ್ಕೆಲವ ನೋಡಿದ ।
ಳೆಂದು ಕಾಣದೆ ಜನದ ಸುಳಿವನು ।
ಬೆಂದಬಿದಿಯನು ಬೈದುಜೇರ್ದಳು ಗತಿಯದೇನೆನುತ ॥
ಇಂದದೇತಕೆ ಸಂಜೆಯಾದರು ।
ಬಂದು ಮನೆಯನು ಸೇರದಿರ್ಪರು ।
ಸುಂದರಾಂಗರು ರಾಮಲಕ್ಷ್ಮಣರೆಂದು ಹಲುಬಿದಳು ॥೧೧೩॥

ಬಳಿಕ ಚಿಂತಿಸಿ ಫಲವದೇನೆಂ ।
ದಳುಕದೆಂದಳು ಕೇಳು ನೀಚನೆ ।
ಕುಲಸ ಯಾಪ್ತಿಯನೆಳಸಿ ಬಂದೆಯ ಖುಲ್ಲರಾವಣನೆ ॥
ಅಲಘುಶೌರ‍್ಯನೆನುತ್ತ ನಿರ್ಜನ ।
ನಿಳಯದಲಿ ದಂಭವನು ತೋರುವೆ ।
ಗಳಿಗೆ ತಾಳದೊಡಾಗ ಕಾಣಲುಬಹುದು ಪೌರುಷವ ॥೧೧೪॥

ಆರು ತಾನೆಂಬುದನು ತಿಳಿಯದೆ |
ಮೀರಿ ತುಟಿಗಳ ಮಾತನಾಡುವೆ |
ಧೀರ ಗುಣಗಂಭೀರ ರಾಘವನರಸಿ ನಾನಹೆನು ||
ಮೇರುವಂದದೊಳಚಲನಬ್ಧಿವೊ |
ಯಾರಿಗಂ ತಡೆಯಲ್ಕಶಕ್ಯನ |
ಪಾರಶೌರ್ಯನು ರಾಮನಾತನರಾಣಿ ನಾನಹೆನು ||೧೧೫||

ಸರ್ವಲಕ್ಷಣಸಂಪದನ್ವಿತ |
ನುರ್ವಿಯಂದದಿ ಸಹನಶಾಲಿಯು |
ಶರ್ವಭುಜಬಲನೆನಿಪ ರಘುಜನ ಪತ್ನಿ ನಾನಹೆನು ||
ಸರ್ವಧರ್ಮವಿನಾಶರೆನಿಸುತ |
ಉರ್ವಿ ಕೋವಿದದುಷ್ಟದನುಜರ |
ಗರ್ವಗಿರಿಪವಿದಾಶರಥಿಯಾ ಮಡದಿ ನಾನಹೆನು ||೧೧೬||

ಹರಿಯು ಬುಂಜಿಪವಸ್ತುವನು ಹುಲು |
ನರಿಯು ಬಯಸುತೆ ಬದುಕಬಲ್ಲದೆ |
ಕರಿಯಭುಜಗನ ಸರಸಕೆಳಸಿದನರನು ಜೀವಿಪನೆ ||
ಉರಿವಬೆಂಕಿಯನುಟ್ಟಬಟ್ಟೆಯೊ |
ಳರುಕಿಸುವೆನೆಂಬಾತನುಳವನೆ |
ಧರೆಯಮೇಲಿನ್ನಿರವೆ ರಾಮನ ಸತಿಯನಳಿಪಿದಗೆ ||೧೧೭||

ಶರಧಿಗೆಣೆಯೇ ಕಾಲುವೆಯು ಮದ ।
ಕರಿಗೆ ಸಾಟಿಯೆ ಸೂಕರನು ಮೇಣ್ ।
ಗರುಡನಿಗೆ ವಾಯಸವೆಣೆಯೆ ಕನಕಕ್ಕೆ ಕಬ್ಬಿಣವೆ ॥
ಸುರಪನಿದಿರೊಳು ಹುಲುಕಿರಾತನೆ ।
ಹರಿಗೆ ಸಮನೇ ಜಂಬುಕನು ನರ ।
ವರಗೆ ರಾಮಂಗಿದಿರೆ ಖಳನೀನೆಂದಳಾಸಾಧ್ವಿ ॥೧೧೮॥

ವ್ರತದ ಜಪತಪದತುಲಫಲಗಳು ।
ಪತಿಯ ಸೇವಾಮಾತ್ರದಿಂ ನಿಜ ।
ಸತಿಗೆ ದೊರೆವುವು ಮೇಲೆ ಸದ್ಗತಿಕರತಲಾಮಲಕ ॥
ಕ್ಷಿತಿಯೊಳದನಾಚರಿಸುತಿರ್ಪೆನ ।
ಗಿತರವಿರ್ಪುದೆ ರಾಮನಲ್ಲದೆ ।
ಗತಿಮನೋವಾಕ್ಕಾಯಸಾಕ್ಷಿಯೊಳವನ ನಂಬಿಹೆನು ॥೧೧೯॥

ಸಿರಿಯ ಸೊಬಗನು ಪೋಲ್ವಸೊಬಗೈ ।
ಸಿರಿಯು ಧನದನಭಾಗ್ಯಕಿಮ್ಮಡಿ ।
ಕರೆದೊಡಾಗಳೆ ಸಾಸಿರಾಳ್ಗಳು ಹೈಹಸಾದೆನುತ ।
ಕರವ ಜೋಡಿಸಿ ಸೇವಿಪುದು ಮೇಂ ।
ಹರಣದೆರೆಯನ ಚರಣಸೇವಾ ।
ಪರಮಸಾಮ್ರಾಜ್ಯಾಭಿಷೇಕೋತ್ಸವಕೆಸರಿವಹವೆ ॥೧೨೦॥

ಶೀಲವತಿಯುಹಸತಿಯು ನಿಜಪತಿ ।
ಯುಳಿಗದೆ ದೇಹವನು ತೇಯುತೆ ।
ಕಾಲಕಾಲದೊಳೊಪ್ಪುವುಪಚಾರಗಳನೊಲಿದೆಸಗಿ ॥
ಜಾಲಗೆಯ್ಯದೆ ಸಕಲಕಾರ್ಯದೊ ।
ಳಾಳಿಯುಂದದೆ ನಡೆಯೆ ಸಾಧ್ವೀ ।
ಮೌಳಿಯೆನಿಸುತಲಿಹಪರಂಗಳ ಸೂರೆಗೊಂಬುವಳು ॥೧೨೧॥

ಭಂಡದನುಜಾಧಮನೆ ನಿನ್ನಯ ।
ಗುಂಡಿಗೆಯುನಿರದಿರಿವಸುಭಟರ ।
ಗಂಡ ರಿಪುಭೇರುಂಡ ರಘುಜೋದ್ದಂಡನೈತಹನು ॥
ದಿಂಡುದರಿಯುತ ನಿನ್ನಕೊಬ್ಬಿದ ।
ಖಂಡವನು ನೆರೆಕಿತ್ತು ರಕುತವ ।
ಕೊಂಡು ಭೂತಂಗಳನು ತಣಿಸುವಭೂಪನೈತಹನು ॥೧೨೨॥

ದುರುಳ ನಿನ್ನೊಡಹುಟ್ಟಿದವಳಿಗೆ ।
ಮರೆಯುದಂದದ ಗುರುತನೆಸಗುತ ।
ಖರನ ಸಂಹರಿಸಿರ್ದದಾನವಕಾಲನೈತಹನು ॥
ಧರೆಯು ಭಾರವ ತಗ್ಗಿಸುವೆನೆಂ ।
ದುರುವಭಾಷೆಯನಿತ್ತು ಮುನಿಜನ ।
ಕಿರದೆ ಕಾರ್ಯೋದ್ಯುಕ್ತನಾಗಿಹ ದೇವನೈತಹನು ॥೧೨೩॥

ಪರರ ಸತಿಯರಿಗಳುಪಿದಧಮನ ।
ಭರದಿನೊಯ್ವರು ಯಮನ ಕಿಂಕರ ।
ರುರುಳಸುವರಾಘೋರಕುಂಭೀಪಾಕನರಕದಲಿ ॥
ಅರಿಚಲಯ್ಯೋಎಂಬರಿಲ್ಲವು ।
ಸರಿಯಲತ್ತಿತ್ತಿರಿದು ಶೂಲದೊ ।
ಳುರಿಗೆ ನೂಕುವರರಿಯ ನೀನಿದನೆಂದಳಂದುಮುಖಿ ॥೧೨೪॥

ನುಡಿಯುತಿಂತವನಿಜೆಯು ಮತ್ತೊಡ ।
ನೊಡೆಯನೈಋತಹದೆಸೆಯ ನೋಡುತ ।
ಸಡಿಲವಾಗಲು ಮನದಬಯಕೆಯು ಕೂಡೆ ಕಡುಬೆದರಿ ॥
ಮಡದಿಮಣಿ ಕಂಗೆಡುತ ಬಿಸುಸು ।
ಯ್ದೆಡೆಯ ಕಂಭವನೊರಗೆ ಕಾಣುತ ।
ತಡೆದೊಡೆನ್ನಯ ಕಾರ್ಯ ಕೆಡುವುದೆನುತ್ತ ರಾವಣನು ॥೧೨೫॥

ಎಲೆಗೆ ನಿನ್ನನು ವರಿಸುವುದಕಾ ।
ಹಲವುಚೋಹವ ಧರಿಸಿ ಬಂದವ ।
ರೊಳಗದಾವನೊ ನನ್ನವೇಷವ ನೊಂದುತ್ತೈತಂದು ॥
ಫಲವನೊಂದದೆ ಪೋದಮಾತ್ರದೆ ।
ನೆಲದೊಳಗ್ಗಳನೆನಿಪರಾವಣ ।
ನಳುಕಿದನು ಧನುವೆತ್ತಲೆಂಬೆಯ ನೋಡು ಸೀನವನ ॥೧೨೬॥

ಹತ್ತು ತಲೆಗಳು ತೋಳ್ಗಳಿಪ್ಪ ।
ತ್ತೆತ್ತಣದ್ಭುತಕಾಯವೀತನ ।
ನೆತ್ತಿಗೆಣ್ಣೆಯನೆತ್ತಣಿಂ ತಂದೊತ್ತಿದಳೊ ತಾಯಿ ॥
ಎತ್ತಿದಾತೋಳ್ಬೀಳದಾಗದೆ ।
ತೊತ್ತುಗಳ ಸಂದಣಿಯು ದಣಿಯದೆ ।
ಹೆತ್ತವರಿಗುಬ್ಬಸವನೀಯದೆ ಬೆಳೆದುದೀ ಶಿಶುವು ॥೧೭೭॥

ಎಂದುನೋಡಿದಜನದ ಕಣ್ಮನ ।
ಕೊಂದಿಸುತ ವಿಸ್ಮಯವ ಕಾರ್ಮುಗಿ ।
ಲೊಂದದೇಕಿಳೆಗಿಳದುದೆಂಬಂತೆಸೆಯುತಿದಿರಿನಲಿ ॥
ಸುಂದರಾಂಗಿಯನೊಲಿಸಲಿದು ತ ।
ಕ್ಕಂದವಾಗಿಹುದೆನುತ ಗರ್ವಿಸಿ ।
ಮಂದಮತಿಯೊಲವಿಂದೆ ನಿಂದಿರೆ ಸೀತೆ ಬೆದರಿದಳು ॥೧೭೮॥

ಮುಗುದೆ ನೋಡೀಗೆನ್ನ ಚೆಲುವನು ।
ಬಗೆಗಿದೊಪ್ಪಿತೆ ಪೇಳು ನಿಜವನು ।
ಬೊಗಸೆಗಣ್ಗಳ ತೃಷೆಯು ಕಳೆದುಕೊ ನೋಡಿ ಮನತಣಿಯೆ ॥
ಪುಗುತಲಳಕಾವತಿಯ ಯಕ್ಷರ ।
ಹಗರಣಂಗೊಳಿಸುತೆ ಕುಬೇರನ ।
ಗಗನಯಾನವನಾವಿಮಾನವ ತಂದಭಟನಾನೆ ॥ ॥೧೭೯॥

ಹಲವುಪರಿಯೊಳು ಶಿವನ ಭಜಿಸು ।
ತ್ತೊಲಿಯದಿರಲವನಾಗ ಕೆರಳು ।
ತ್ತಲುಗಿಸಿದನಾರಜತಗಿರಿಯನು ತೋಳಬಲುಹಿಂದೆ ॥
ಅಳುಕಿದಳು ಪಾರ್ವತಿಯು ಬಳಕಾ ।
ನೆಳಸಿದಿಷ್ಟವನೆಲ್ಲ ಪಶುಪತಿ ।
ಸಲಿಸದನು ನೀಂ ಕೇಳ್ವುದಿಲ್ಲವೆಎಂದು ಖಲನೊರೆದು ॥೧೩೦॥

ಧರೆಯು ಬಿರಿದತ್ತೆಂಬೊಲದನೊದೆ ।
ದಿರದೆ ಝುಂಕಿಸಿ ಕರವನೀಡುತ ।
ಧರಣಿಜೆಯ ಸಿರಿಮುಡಿಗೆ ಹಾಯ್ದನು ಘೋರದಾನವನು ॥
ಸುರರು ನಭದಲಿ ಬೇಡಬೇಡೆಂ ।
ದಿರದೆ ಕೂಗಲುಗಣನೆಗೆಯ್ಯದೆ ।
ಪರಿಮಳದೆಮಗಮಗಿಪಜಡೆಯನು ಬಿಡದೆತುಡುಕಿದನು ॥೧೩೧॥

ಭೂಮಿದೇವಿಯು ಗರ್ಭಕೋಶದೊ ।
ಳೀಮಹಾಸತಿಯಿರ್ದಕಾಲದೆ ।
ಕೋಮಲತೆವಡೆದಿವಳಕಚಭರಕಿಲ್ಲದಿಹಕೊರತೆ ॥
ಕಾಮುಕನ ಕಡುಮುಳಿರ್ದದನುಜನ ।
ವಾಮಕರದಾಂಕಿನಲಿ ನೊಂದುದೆ ।
ಹಾಮಹಾದೇವೆನುತ ಚೀರ್ದುದು ಮೇಲೆ ಸುರಕಟಕ ॥೧೩೨॥

ಜಡಿದು ಮುಡಿಯನು ಸೆಳೆದು ಕೈನೆಯೆ ।
ಸಡೆ ಭರದೆ ನಡೆಯೆಂದು ಗರ್ಜಿಸು ।
ತೊಡನೆ ತಂದನು ಕುಕ್ಕರಿಸಿದನು ತನ್ನರಥದೊಳಗೆ ॥
ಬಡಲಿಕೊಂಕಿನ ನಡುಗುವಂಗದ ।
ದಡದಡಿಸುತಿಹ ಮನದ ಮಾನಿನಿ ।
ಕಡುಬಡವೆಯಾತೆರದಿನಿದ್ದಳು ರಾಮರಾಮೆನುತ ॥ ॥೧೩೩॥

ಮೂರನೆಯಸಂಧಿ ಸಂಪೂರ್ಣಂ.

೪ನೆಯಸಂಧಿ.

ಸೂ॥ ಭರದೆ ತಡೆದ ಜಟಾಯುವನು ಸಲೆ ।
ತರಿದು ರಾವಣನೈದಿ ಲಂಕೆಯೊ ।
ಳಿರಿಸಿದನು ಸೀತೆಯನಶೋಕೊದ್ಯಾನಮಧ್ಯದಲಿ ॥

ಎತ್ತಲಿಪ್ಪೆಯೊ ರಮಣ ನೀನಿಂ ।
ದೆತ್ತಲಿಪ್ಪೈ ಲಕ್ಷ್ಮಣನೆ ಖಳ ।
ನಿತ್ತಲೆನ್ನನು ಪಿಡಿಯುತೊಯ್ವನು ನೀವದೆಲ್ಲಿಹಿರಿ ॥
ಒತ್ತಿದುದು ಮುಳ್ಳೆನ್ನಚರಣಕೆ ।
ನುತ್ತಲಾನಿರಲೆನಿಕೊ ಮರುಗುತ ।
ಸುತ್ತಿಕೊಂಡುಪಚಾರವೆಸಗುವ ಹಿತರದೆಲ್ಲಿಹಿರಿ ॥೧॥

ಹೆತ್ತ ತಾಯ್ತಂದೆಗಳು ಸಟೆ ನೀ ।
ಸುತ್ತಮೋತ್ತಮನೆನುತೆ ನಿನ್ನನೆ ।
ಹತ್ತಿಕೊಂಡಿಹಳಲ್ಲಪೇಕ್ಷೆಯೆ ದೇವ ರಾಘವನೇ ॥
ಮಿತ್ತುವಿನ ಬಾಯ್ಯುದ್ದತ್ತದಾಗಿಹ ।
ಮತ್ತಕಾಶಿನಿಯನ್ನುಬಿಡಿಸಲು ।
ಮತ್ತದಾವಂಗಳವು ಪುರುಷೋತ್ತಮನೆ ನೀಂ ಬಿಡಿಸಾ ॥ ೨ ॥

ಕೊಂಡುಪೋಪನು ಲಂಕೆಗೆನ್ನನು ।
ಚಂಡದನುಜನು ರಾವಣನು ಕಡಿ ।
ಕಂಡವೆಸಗುತ್ತಿವನ ನೆನ್ನನದೇಕೆ ಬಿಡಿಸದಿಹೆ ॥
ಭಂಡನಿವನೇಂ ನಿನಗಸಾಧ್ಯನೆ ।
ಖಂಡಪರಶುವಿನಾ ಮಹಾಧನು ।
ಗಂಡುಗೆಡದೇ ನಿನ್ನ ವಿಕ್ರಮಚಂಡಮಾರುತಕೆ ॥ ೩ ॥

ತಂದೆತಾಯ್ಗಳನುಜ್ಞೆವಡೆಯದೆ ।
ಸಂದಮಾವನ ಬುದ್ಧಿಗೇಳದೆ ।
ಚಂದವಲ್ಲೆಂಬತ್ತೆನಾದಿನಿಯರಸು ಮೀರುತಲಿ ॥
ಬಂಧುಗಳ ಕಡೆಗಣಿಸಿ ಬೇಡಕ ।
ಟೆಂದ ಪೌರರನೆಲ್ಲ ಧಿಕ್ಕರಿ ।
ಸಿಂದು ನಿನ್ನನೆ ನಂಬಿಬಂದೀತರಳೆಗೀವಿಧಿಯೆ ॥ ೪ ॥

ಅಂದು ನೀನೆಂದುದನು ಕೇಳದೆ ।
ಬಂಮುದಕ್ಕೆನಗಿನಿತು ಶಿಕ್ಷೆಯೆ ।
ಕುಂದು ನಿನ್ನಯ ಕುಲಕಿದೆಂಬುದನಿಂದು ಮರೆದಪೆಯಾ ।
ಸುಂದರಾಂಗನೆ ನಿನ್ನ ಸುದತಿಯು ।
ನೊಂದಳೈ ಬಲು ಬೆಂದಳೈ ನೀಂ ।
ಬಂದು ಬಿಡಿಸೆಂ ಸೆರೆಯನೆಂದೇಣಾಕ್ಷಿಯೊಂರಲಿದಳು ॥೩೯॥

ಬಾರೊಬಾರೋ ರಮಣ ನಿನ್ನೀ ।
ನಾರಿಯನು ಬಲುಹಿಂದೆ ದುರುಳನು ।
ಚೋರನಂದದೊಳೆಳೆದುಕೊಂಡೊಯ್ದಪನು ಪರಿಭವಿಸಿ ।
ಮಿಾರಿ ಭೂಮಿಯ ಕಡಲನಿವ ತಾಂ ।
ಸೇರುವನಿತರೊಳೆನ್ನ ಬಿಡಿಸೈ ।
ಸಾರಸಾಕ್ಷನೆ ಬಳಿಕ ತೃಣವೇ ಬೆಟ್ಟವಪ್ಪುದಲಾ ॥೬॥

ರಾಮ ರಕ್ಷಿಸು ಸಕಲಜಗದಭಿ ।
ರಾಮ ರಕ್ಷಿಸು ವೈರಿವಂಶವಿ ।
ರಾಮ ರಕ್ಷಿಸು ರಕ್ಷಿಸಕಟಾ ಈ ಯನಾಥೆಯನು ॥
ಪ್ರೇಮದಿಂದೊಡಗೂಡಿ ನಿನ್ನಯ ।
ನಾಮಮಾತ್ರವ ಭಜಿಸಲದು ಸು ।
ತ್ರಾಮಪದವಿಯ ಸೂರೆಗುಡುವುದೆನಿಪ್ಪನುಡಿ ಪುಸಿಯೆ ॥೭॥

ದೇವ ನಿನ್ನಯ ಪಾದಪೂಜೆಯ ।
ಭಾವಿಸಲ್ತನಗಖಿಲಮೆಂದೇ ।
ಸೇವಿಸುತ್ತಿಹಮಡದಿಯೊಳಗಿಂತೇಕೆ ಖತಿ ನಿನಗೆ ॥
ಜೀವಿತೇಶನೆ ಬೇಗನೈದೀ ।
ಗಾವಿಲನ ಕಯ್ಯಿಂದ ಬಿಡಿಸೈ ।
ಕಾವನೇನೀಂ ಕಾಯದಿರಲಿನ್ನಾರು ಕಾವವರು ॥೮॥

ಎಲೆಲೆ ವನದಭಿಮಾನದೇವತೆ ।
ಗಳಿರ ನಿಮಗಿದೊ ಕರವಮುಗಿವೆನು ।
ಬಲುಹಿನಿಂ ರಾವಣನು ನಿನ್ನಯ ಮಡದಿ ಸೀತೆಯನು ॥
ಪಲತೆರದಿ ಬೇಡಿದೊಡಮೋವದೆ ।
ಕಳವಿನಿಂ ಸೆಳೆದೊಯ್ದನೆನುತಾ ।
ಯಿಳೆಯರಮಣಂಗೊರೆವುದೌ ನೀವಲ್ತೆ ಗತಿ ತನಗೆ ॥೯॥

ವನದವೃಕ್ಷಂಗಳಿರ ನೀವೆ ।
ನ್ನಿನಿಯನೈತರಲವನೊಳೊರೆವುದು ।
ತನಗೆಸಾಜಮೆನಿಪ್ಪಶಕ್ತಿಯದಿರುವಪರಿಯಂತ ॥
ದನುಜನಿಗೆ ವಶೆಯಾಗೆನೆಂದದು ।
ಕೊನೆಯನೈದುವವೇಳೆ ಸಮನಿಸೆ ।
ತನುವನೀಗುವೆನೆಂದುಮರಿಕೆಯಗೈದಳವಳೆನುತ ॥೧೦॥

ಅಸಿತರೊಳು ಸೀಂ ಒಂದು ಬಿಡಿಸುವು
ದೆಸೆಸಲಾಗದು ಬೇರೆಪರಿಯನು
ಜನಕರಾಜರ್ಷಿಯೊಳು ಜನಿಸಿದಳೆನಿಸಿಕೊಳುತಿಹೆನು
ಮನದೆಸಂಶಯಕೆಡೆಯಾಯಿತ್ತೊಡೆ
ಮನುಕುಲೇಶನೆ ಸತ್ವಗುಂದುತ ।
ಅಣುವ ಘನವಾಗೆಣಿಸಿ ಮಾಳ್ಪುದನುಳಿವೆ ಬೇಸರದೆ ॥೧೧॥

ತನ್ನ ಪಾತಿವ್ರತ್ಯವಹ್ನಿಗೆ ।
ನಿನ್ನಸಾಹಸಮೆಂಬಮಾರುತ ।
ನನ್ನು ಸೇರಿಸಿ ದಹಿಸು ದಾನವವಂಶಕಾನನವ ॥
ಗನ್ನಗತಕವಿದಲ್ಲನಂಬುವು ।
ದೆನ್ನನುಡಿಗಳನೆನುತ ಸೀತೆಯು ।
ಬಿನ್ನವಿಸಿದಳು ಕರವಜೋಡಿಸುತೆನ್ನಿನುತ್ಪತಿಗೆ ॥೧೨॥

ಇಂತು ಹಲವಂಗದಲಿ ಹಲುಬುತ ।
ಕಾಂತನಾಮಸ್ಮರಣೆಮಾಡುವ ।
ಕಾಂತೆಯನುಕೊಂಡಂತರಿಕ್ಷದೆ ಪೋಪರಾವಣನ ॥
ಮುಂತೆವೃಕ್ಷದತುದಿಯೊಳಿದ್ದ ಸ ।
ಮಂತು ನಿಟ್ಟಿಸುತಾಜಟಾಯುವು ।
ಚೇತೆಯೊಂದುತಲಾಗ ತಡೆದನು ನುಡಿಸಿದನು ಖಳನ ॥೧೩॥

ಏನಿದಕ್ಕಟ ವಿಶ್ರವಸ್ಸಿನ ।
ಸೂನುವೇ ಕಥೆಗಳಲಿ ನಿನ್ನನು ।
ಮಾನಿ ಬಹುಧರ್ಮಾತ್ಮನೆಂದೊರೆವುದನು ಕೇಳ್ದಿಹೆನು ॥
ದಾನವೇಶ್ವರನೆನಿಸುತೀಪರಿ ।
ಮಾನಹೀನನವೋಲಕಾರ್ಯವಿ ।
ದೇನನೆಸಗಿದೆ ಮೂರುಲೋಕದ ವೀರಗಿದು ಸರಿಯೆ ॥೧೪॥

ಎಲವೊ ನೀನಿಂದಿವಳನಾರಂ ।
ದೊಲಿಸಲಿಚ್ಛೈಸಿಂತು ಕಪಟವ ।
ಬಳಸುತೀಪರಿ ಪಿಡಿಯುತೊಯ್ವೈ ನಿನಗೆ ತೀರುವುದೇ ॥
ಹಲವುಲೋಕವ ಸೃಜಿಸಿ ಸಲಹುತ ।
ವಿಲಯವೆಸಗುವನಾದಿಪುರುಷನ ।
ಲಲನೆಯೊಲಿವಳೆ ಪಾಪಿ ತೆಗೆ ನಿನಗೇಕೆ ದುರ್ವ್ಯಸನ ॥೧೫॥

ಅರಸನೆನಿಪವನಾತ್ಮಧರ್ಮಕೆ ।
ಕೊರತೆ ಬಾರದತೆರದೆ ನಡೆವುನು ।
ಪರಸತಿಯುರನು ನಿಜಸಹೋದರಿಯುರವೊಲಾದರಿಸಿ ॥
ಧರೆಯು ಪಾಲಿಪುದಿದುವೆ ನೀತಿಯು ।
ಮರೆತು ನೀನಿದನಿಂತು ಕಾಮುಕ ।
ರೆರೆಯುನಾಗುತ ಲೋಕಮಾತೆಯೊಳೆರಡನೆಣಿಸಿದೆಯಾ ॥೧೬॥

ನಿಲಿಸು ರಥವನ್ನಿಳಿಸು ಮಾತೆಯ ।
ಖಲನೆ ನಾನಾರೆಂಬುದರಿಯೆಯ ।
ಬಲುಮೆಯೊಂದಿದ ಗೃಧ್ರರಾಜನು ನಾಂ ಜಟಾಯುಕಣಾ ॥
ಕಲಕುವೆನು ನಿನ್ನೊಡಲ ರಕುತವ ।
ನೆಲವೊ ನನಗಿದಿರಾಗು ನಿನ್ನಯ ।
ಹಲವು ತಲೆಗಳಿಗಾನುಬೆದರೆನು ನೋಡು ತನ್ನದಟ ॥೧೩॥

ಎನುತ ಮಾರುತ ನಭಕೆ ತನಗು ।
ಳ್ಳನಿತು ಶಕ್ತಿಯನಾಂತು ರಥವನು ।
ಹಣಿದವಾಡುವೆನೆನುತ ರೆಕ್ಕೆಯೊಳೆರಗುತಪ್ಪಳಿಸೆ ॥
ಝುಣಝುಣಧ್ವನಿಗೈದು ಘಂಟೆಗ ।
ಳೆಣಿಸಲಸದಳವಾಗಲುದುರಿದು ।
ಮಣಿಯುರಂಕೆಟ್ಟಳಕವಾದುವು ರಥದ ಕೀಲುಗಳು ॥೧೪॥

ಜೋತತೊಂಡೆಯುಪರ್ಣ ವಾಯಸ ।
ವಾತುರದೊಳೆರಗುತ್ತ ಶಬರನ ।
ನೂತನವ ಬಲೆಗಿಂದೆ ಸಿಲುಕಿದತೆರದೊಳೀದಿನದಿ ॥
ಸೀತೆಯನು ಬಯಸುತ್ತ ತನ್ನೀ ।
ಘಾತಕಡೆಯಾಗುತ್ತಲೊರಗುವ ।
ರೀತಿಯೊದವಿತು ನಿನಗೆ ಕೊಳ್ಳೆಂದೆನುತ ಕೊಕ್ಕಿನಲಿ ॥೧೫॥

ಕುಕ್ಕುತಾತನ ತನುವ ದಕುತವ ।
ದುಕ್ಕುವಂದದಿ ಬಗಿದು ಕಾಲ್ಗಳ ।
ನಿಕ್ಕಿ ಸೂತನ ಕೊಂದು ರಥವಾಜಿಗಳ ಖಂಡಿಸಲು ।
ಪಕ್ಕಿಗೇನೀಪೌರುಷವೆನು ।
ತ್ರಿಕ್ಕಜಂಗೊಂಡಾಗ ಖಳ ದು ।
ವ್ರಿಕ್ಕಿ ಧಾರಿಣಿಗಿರದೆ ಧನುಪಿಂಗಸಮುದಾಣವನು ।। ೨೦ ।।

ಅಳವಡಿಸುತೆಸೆಯಲ್ಕೆ ತಾನದ ।
ಕಳುಕದಾಗಳೆ ಬೀಸಿ ರೆಕ್ಕೆಯು ।
ಕೆಲಕೆ ಜಾರಿಸುತಂದುಮುಂದೆಡೆ ಬಂದ ಬಾಣವನು ।
ತಲೆಯ ಮೇಲಣ ಮಕುಟವೆಲ್ಲವು ।
ನೆಲಕೆ ಬೀಳ್ವವ್ರೊಲೊದೆದು ಬೆನ್ನೊಳು ।
ಕುಳಿತು ಮಂಡೆಯನಿರದೆ ಕೊಕ್ಕಿಂಕುಕ್ಕಿ ಗಾಸಿಸಲು ।। ೨೧ ।।

ಬದರಿದನು ಬೆನ್ನಿಂದ ಪಕ್ಷಿಯು ।
ನಿದನುಪೇಕ್ಷಿಸಲಾಗದೆನುತವೆ ।
ಬದಿಯ ಕಡುಗವ ಸೆಳೆದು ರೆಕ್ಕೆಗಳೆರಡನುರೆ ತರಿಯೆ ।
ಪದುಮನಾಭನೆ ರಾಮ ಸಲಹೆಂ ।
ದೊದರುತುರುಳಿದನಾಜಟಾಯುವು ।
ಬೆದರುತಂಗನೆ ಜೇದ್ವರ್ ವೈದಳು ನಿಜಪುರಾಕೃತವ ।। ೨೨ ।।

ಏಸಿದಕಟೀಗೆನ್ನದೃಷ್ಟವು ।
ಹೀನಭಾಗ್ಯೆಯನಿಂದು ರಕ್ಷಿಸ ।
ಲೀನಭಸ್ಸ್ಥಳಗಾಮಿ ಯತ್ನಿಸುತಸುವ ನೀಗುತಿಹೆ ।
ಪ್ರಾಣನಾಥನನುಳಿದ ಸುದತಿಗೆ ।
ಹಾನಿಯಲ್ಲದೆ ಲೇಸುಬಪ್ಪುದೆ ।
ದೀನೆಯಾದೆನಗೇನುಗತಿ ಯೆಂದಬಲೆಯೊರಲಿದಳು ॥ ೨೩ ॥

ಪರಮಮಿತ್ರನೆ ಪಕ್ಷಿರಾಜನೆ ।
ದುರಿತವತಿಗೆನಗಾಗಿ ನೀನೀ ।
ಪರಿಯಕಷ್ಟಕೆ ಗುರಿಯೆನಿಸಿದೈ ಮರೆಯೆ ನಾಸಿದನು ॥
ಪರಮಪುರುಷನು ರಾಮಚಂದ್ರನು
ಬರುವನಿಲ್ಲಿಗೆ ಮರೆಯದೆಲ್ಲವ
ನರುಹುತವನ ಹಸಾದವಾಸುತೆ ಮೋಕ್ಷಸುಖಿಯಾಗು ॥ ೨೪ ॥

ಎನುತ ಪೇಳ್ವನಿತರೊಳು ಖಳನಾ ।
ವನಿತೆಯನು ಮುಡಿಹಿಡಿಯುತೆತ್ತು ।
ತ್ವನಿಲವೇಗದೊಳಡರಿ ನಭವನು ಮುಂದೆ ಪೋಗುತಿರೆ ।
ಅನುಪಮಾನಶರೀರದಿಂದಲಿ ।
ಘನತರಾದ್ರಿಯ ಕೋಡುಗಳ್ಗಳ ।
ನನುಕರಿಸುತೆರಡಿಂದ ಕುಳಿತಿಹ ಕಪಿಗಳೈವರನು । ॥ ೨೫ ॥

ಸುದತಿ ಕಾಣುತ ತನ್ನ ಮೇಲಣ ।
ಹೊದಕೆಯಂಚನು ಗೀಳುತದರೊಳು ।
ಹುದುಗಿಸುತ ತೊಡವುಗಳನಾಗಳೆ ಕಟ್ಟಪೊಟ್ಟಳವ ॥
ಸದಯರೇ ನೀವಿದನುಕೊಳ್ವುದು ।
ಹೃದಯವಲ್ಲಭರಾಮನೈತರೆ ।
ಮುದದೊಳರುಹುವುದೆನ್ನವಸ್ಥೆಯನೆನುತಲವರೆಡೆಗೆ ॥೨೬॥

ಎಸೆಯಲದನವರಾಂತು ಕಡುಬೆ ।
ಕ್ಕಸವನಾನುತಲೆವೆಯನಿಕ್ಕದೆ ।
ಯಸುರಚೇಷ್ಟೆಯ ನೋಡುತಿರ್ದರು ಮರುಗಿ ಮನದೊಳಗೆ ॥
ಶಶಿವದನೆಯಿನ್ನೇಂ ತನಗೆಕೈ ।
ಬಸಮೆಸಗದಂತಾಯ್ತೆನುತಲಸ ।
ವಸದಿ ಪೋಗುತ ಕಾಣದಾದನು ದನುಜಪತಿಯಿದನು ॥೨೭॥

ತೆರಳುತೀಪರಿಯಿಂದೆ ಕೆಳಗಡೆ ।
ಮೆರೆವಪಂಪಾಸರವ ದಾಂಟುತ ।
ಪರಿಪರಿಯ ವನಪರ್ವತಂಗಳನೆಲ್ಲ ಪಿಂದುಳುಹಿ ॥
ಧರೆಯಭಾಗವನೆಲ್ಲ ಕಳೆಯುತ ।
ತರತರದೊಳುಪ್ಪತಿಹ ತೆರೆಗಳ ।
ನುರುಭಯಂಕರವಾಗಿ ಭೋರ್ಗರೆಯುತ್ತೆ ರಂಜಿಸುವ ॥೨೮॥

ಶರಧಿಯನು ಕಂಡವರವಮಧ್ಯದೆ ।
ಮೆರೆವ ಕೋಟೆಗಳಿಂದ ಸುರನರ ।
ವರರಿಗಸದಳವುಗುವೊಡೆಂಬವೊಲೆಸೆವಲಂಕೆಯನು ॥
ಹರಿಸದಿಂದೊಳವೊಕ್ಕು ಲಕ್ಷ್ಮೀ ।
ಸುರುಚಿರಾವುಳಮುಖವು ದಿಟವಿದು ।
ಕೊರತೆಯೇನಿವಕೆಂಬವೊಲ್ಮೆರೆವರಮನೆಯನೈದಿ ॥೨೯॥

ನಿರುಪಮಾಂತಃಪುರವ ಸೇರುತ ।
ಕರೆಮ ಭೂತಾಕೃತಿಯ ವದನದ ।
ಪರಿಚರಿಯಸುರಿಯರ ಸೀತೆಯಸೇವೆಗನುಗೊಳಿಸಿ ॥
ಸರಸಿಜಾನನೆಯಶಾಂತಿಯನುರೆ ।
ಸಿರದೊಳಾನುತ ನೀವು ನಡೆವುದು ।
ಕೊರತೆಯಿನಿಸುಂ ಮನಕೆತೋರದತೆರದೆ ಸೇವಿಪುದು ॥೩೦॥

ತನಗಿವಳನೊಡಗೂಡಿಸುವುದೇಂ ।
ಘನದಕಾರ್ಯವು ನಿಮಗದೆನಿಬರೊ ।
ವಸಿತೆಯರ್ಕಳನೊಲಿಸಿ ನೆರಪಿದ ಚದುರೆಯರುನೀವು ॥
ಎನುತ ನೇಮಿಸಿ ಸಭೆಗೆ ನಡೆತಂ ।
ದಸಿತುವಂ ತಾನೆಸಗಿದಕೃತವ ।
ಸಿಸಿಸು ಹೇಸದೆ ಸಚಿವಮುಖ್ಯರಿಗೊರೆದು ತವಕದಲಿ ॥೩೧॥

ಬರಿಸಿ ತನಗತ್ಯಾಪ್ತಗೆನಿಸುವ ।
ದುರಳರಕ್ಕಸರೆಂಟುಮಂದಿಯ ।
ನೊರೆದನವರೊಡನಾ ಜನಸ್ಥಾನದಲಿ ರಾಘವನು ॥
ಚರಿಸುವನು ಸೋದರನ ವೆರಸುತೆ ।
ಮರೆಸಿ ನೀವಲ್ಲಿರುತೆ ನಡೆವಾ ।
ಚರಿಯವೆಲ್ಲವನೆನಗೆ ಲೇಖನಮುಖದೆ ತಿಳಯಿಸುತ ॥೩೦॥

ಸಮಯವೀಕ್ಷಿಸುತವರ ಕೊಲುವಾ ।
ಕ್ರಮವ ಯೋಜಿಸುತಿರ್ಪುದೆನುತೊರೆ ।
ದಮಿತವಾದುಡುಗೊರೆಯನಿತ್ತವರುಗಳ ಬೀಳ್ಕೊಟ್ಟು ॥
ಸುಮಶರಂಗಳು ನಾಂಟೆ ಹೃದಯವ ।
ನಮಮ ಕಡುಬೆಮೆಗೊಂಡು ಕುಮತಿಯು ।
ಕಮಲಲೋಚನೆಯೆಡೆಗೆ ಬಂದನು ನುಡಿಸಿದನು ಸತಿಯ ॥೩೧॥

ಎಲೆಗೆ ಸೀತಾಲಲನೆ ನಿನ್ನಯ ।
ಚೆಲುವಿಗೆನ್ನಸು ಸೂರೆಪೋದುದು ।
ಸಲೆ ಕಟಾಕ್ಷವ ಬೀರುತೆನ್ನನು ಕರುಣದಿಂದುಳುಹು ॥
ಬಲವಿಹೀನನನಂಗನಿಂದೀ ।
ಬಲನಿಧಾನನೆನಿಪ್ಪ ದಶಶಿರ ।
ಗಳವು ತಾನೆನೆ ಜಗವು ನಗುವುದು ಮಾಣಿಸಿದನೊಲಿದು ॥೩೨॥

ಕ್ಷಿತಿಜೆ ನಿನ್ನಯ ಚರಣಕಮಲ |
ಕ್ಷತಿಶಯನೆನಿಪ್ಪೆನ್ನ ಮಕುಟವ |
ನತುಳಪಾದಕೆಗ್ಗೈದು ಪೂಜಿಪೆನನುದಿನದೊಳದನು ||
ಅತನುಹತಗೆನಗಿಂದು ಸುಖಸಂ |
ತತಿಯನೊದವಿಪ ನಿನ್ನಸಂಗವ |
ಹಿತದೆ ಕರುಣಿಸಿ ಕಾಯಬೇಕೆಂದೆರಗಿದನು ಪದಕೆ ||೨೫||

ಕೇಳುತಿರ್ದಳು ಸುದತಿಯಾತನ |
ಕೀಳುನುಡಿಗಳ ಕೆರಳಿದಳು ಖಳ |
ಖೂಳ ನೀನಿಂತೇಕೆ ಗಳಹುವೆ ಸಾವ ಲೆಕ್ಕಿಸದೆ ||
ಸಾಲುತಲೆಗಳು ನಿನ್ನವಿವು ಭೂ |
ಪಾಲರಾಮನ ಬಾಣವಹ್ನಿ |
ಜ್ವಾಲೆಗಾಹುತಿಯೆನಿಸದುಳಿವುವೆ ಕಾಣೆ ನೀನಿದನು ||೨೬||

ಎಂದುನುಡಿವಾಸತಿಯ ಬಿರುನುಡಿ |
ಗಂದು ದಶಕಂಧರನು ಮುಳಿಯುತ |
ಲೆಂದನಾಕಾಹಿನ ದನುಜೆಯರಿಗಿಂದಿವಳನೊಯ್ದು ||
ಬಂದಿಯೊಳಗಿರಿಸುತ್ತ ಶೋಕೆಯ |
ನಂದನದೊಳುರುಭಯವ ಪುಟ್ಟಿಸು |
ತೊಂದಬಡಿಸರಿಯುಂತ ಕಾದಿಹುದನಿತರೊಳಗಿವಳು ||೨೭

ಒಲಿದರೊಳ್ಳಿತನೊಂದಿ ಸುಖಿಸುವ ।
ಳೊಲಿಯದಿರೆ ಮರುದಿನವೆ ಮಾರಿಗೆ ।
ಬಲಿಯಹಳು ಖಂಡಿತದನುಡಿ ಯಿಂತಿದಕೆ ಕವಡಿಲ್ಲ ॥
ಸಲಿಗೆಯಾನುಡಿಸಲ್ಲದಿವಳೊಳು ।
ಕಲುಮನದ ಕಡುಸೊಕ್ಕಿನಿವಳನು ।
ಬಲುಹಿನಿಂ ಬಸಗೊಳಪುದೆಂದೊದರುತ್ತ ತೆರಳಿದನು ॥ ೩೮ ॥

ಒಡನೆ ಬಂದುದು ದಡಿಗರಕ್ಕಸಿ ।
ಗಡಣವೀಕೆಯ ಮುತ್ತಿಕೊಂಡುದು ।
ನಡೆನಡೆಯೆನುತ್ತಟ್ಟುತಾರ್ಭಟಿಸುತ್ತ ಬೆದರಿಸುತೆ ॥
ಮಡದಿ ಗಡಗಡನಡುಗುತಡಿಯಿಡು ।
ತೊಡೆಯನಹರಘುರಾಮನಡಿಗಳ ।
ಬಿಡದೆ ನೆನೆಯುತೆ ಪೋಗಿಕಾಲವ ಕಳೆದಳಾಬನದೆ ॥ ೩೯ ॥

ನಾಲ್ಕನೆಯಸಂಧಿ ಸಂಪೂರ್ಣಂ.

೫ನೆಯ ಸಂಧಿ.

ಸೂ|| ವರರಘುಜನರಸುತ್ತೆ ಸೀತೆಯು |
ಸುರುವನದಿ ಕಂಡಾಜಟಾಯುವ |
ನರಿಕಬಂಧನವರಿದು ಮಾತಂಗಾದ್ರಿಗೈದಿದನು ||

ಇರಲು ಲಕ್ಷ್ಮಣನಿತ್ತ ಸೀತೆಯ |
ಬಿರುನುಡಿಗೆ ಮರುಮರುಗಿ ಮನದೊಳು |
ತೆರಳುತಣ್ಣನಕಡೆಗೆಕಾನನದೊಳಗೆ ಪೋಗುತಿರೆ ||
ದುರುಳದನುಜನು ಹರಣವಿಡುವಾ |
ಗೊರಲಿದಾನುಡಿಗಂಜಿ ರಾಘುವ |
ನರರೆ ತನ್ನವರಿದನು ಕೇಳ್ದೊಡದೇನಗೈದಪರೊ ||೧||

ಎಂಬಸಂಶಯುವಡರೆ ಮನವನು |
ಹಂಬಲಿಸಿ ತೊಳಲುತ್ತ ವನನಿಕು |
ರುಂಬವನು ನಿಮಿಷದಲಿ ದಾಂಟಿ ಬರುತ್ತಮಿದಿರಿನಲಿ ||
ಕಾಂಬರಾರೆಂದೊತ್ತಿ ನೋಡು |
ತ್ತಂ ಬರುವವನೆ ತಮ್ಮನೆಂದರಿ |
ದಂಬುಜಾಕ್ಷನು ದುಗುಡದಿಂ ನುಡಿಸಿದನು ಲಕ್ಷ್ಮಣನ ||೨||

ಏನಿದೇನೈ ತಮ್ಮ ನಿನ್ನನ
ಹೀನವೆನಿಸಿದರೀತಿ ನೀನೆ ।
ನ್ನಾಣತಿಯ ಮೀರ್ದಿಲ್ಲಿಗೈದಿಹೆ ಸೀತೆಯೆಲ್ಲಿಹಳು ॥
ಕಾನನದೊಳೇಂಬರುತಿರ್ಪಳೆ ।
ಕಾಣಿಸಳು ತನಗೇಕೆ ನಿನ್ನಯ ।
ದೀನವದನವ ನೋಡೆಕಳವಳವಹುದು ಮಾನಸಕೆ ॥೩॥

ತಮ್ಮ ನೀಂ ಪರಮಾಪ್ತನೆಂದರಿ ।
ದೊಮ್ಮೆ ಮಡದಿಯ ನಿನ್ನ ಬಳಿಯೊಳ ।
ಗುಮ್ಮಹದೆ ಬಿಡಲಿಂತುಪೇಕ್ಷಿಸುತವಳನುಳಿಯುವದು ॥
ಸಮ್ಮತವೆ ನಿನಗೆಮ್ಮೊಳೀಪರಿ ।
ದುಮ್ಮನದ ವೈಷಮ್ಯವಕಟಾ ।
ಉಮ್ಮಳಕೆ ಗುರಿಮಾಳ್ಪುದೇನಿದು ಬಿನದವೇಪೇಳಾ ॥೪॥

ದೇಶಕೋಶವನುಳಿದು ಪಿತ್ರರೊ ।
ಳಾಶೆಯನು ಮಿಗೆ ತೊರೆದು ತನಗೆ ನಿ ।
ಜೇಶನೇಗತಿಯೆಂದು ನಂಬುತ್ತೆನ್ನ ಪಿಂದೈದಿ ॥
ಲೇಶಮಾತ್ರವು ಘೋರವಿಪಿನ ।
ಕ್ಲೇಶಕಂಜದೆ ಭೂರಿಸುಗುಣಾ ।
ವೇಶದಿಂ ಮೆಚ್ಚಿಸಿದಮಡದಿಗಿದಲ್ತೆ ಉಡುಗೊರೆಯು ॥೫॥

ಖರನ ಸಂಹರಿಸಿದುದೆ ಮೊದಲಾ |
ಗಿರದೆ ನಮ್ಮೊಳು ಬಹುಳವೈರವ |
ಧರಿಸುತಸುರರು ಸಮಯವೀಕ್ಷಿಸುತಿರ್ಪರೆಂಬುದನು ||
ಅರಿಯದನೆ ನೀನೆನಗೆ ಬುದ್ಧಿಯ |
ನೊರೆಯೆಯಾ ನಾಂಬರ್ಪಕಾಲದೊ |
ಳರರೆನಿನಗಿಂದಂಧಕಾರವದೆಂತು ಸಮನಿಸಿತು ||೬||

ಮನಕೆ ಸಂಶಯವಾಗಿ ತೋರ್ಪುದು |
ಜನಕತನುಜೆಯ ಕುಶಲದಲ್ಲಿಯೆ |
ಮನೆಯೊಳವಳನು ಕಾಂಬೆವೋ ಮೇಣ್ಕಾಣದಳಲುವೆವೋ ||
ವನಿತೆಯಾಮೃದುತನುವಿಗೆಳಸುತೆ |
ದನುಜರವಳನು ಮುರಿದು ತಿನ್ನುತ |
ತಣಿವ ನೊಂದದೆ ಮಾಣರೇಗುವೆನಿದಕೆ ತಾನಿಂದು ||೭||

ಮಾದವೇತಕೆ ಲಕ್ಷ್ಮಣನೆ ನೀ |
ನೈದುವಾ ಸಮಯದಲಿ ತಾನಾ |
ಮೇದಿನೀಸುತೆ ಸುಖದೊಳಿರ್ದಳೆ ತಳಿರಮಂದಿರದೆ ||
ಸೋದರನೆ ಕೃಪೆಯೆತ್ತ ಪೋಯಿ |
ತ್ತಾದುದೇನನಿವಾರ್ಯವಾಕೆಯೊ |
ಳೇದುರಾಗ್ರಹಕೇಂ ನಿಮಿತ್ತವು ಪೇಳು ವಹಿಲದಲಿ ||೮||

ಏತಕಿನ್ನಕಟೆನ್ನ ಬಾಳಿಕೆ ।
ಬೀತತರುತಾನಾದೆನೈ ನನ ।
ಗಾ ತಳೋವರಿಯಿಲ್ಲದಿರೆ ಪೆರತುಂಟೆ ಜೀವನವು ॥
ಧಾತುಗೆಟ್ಟೆನು ತಮ್ಮ ನೀನಿ ।
ನ್ನೇತಕೀಬಳಿಯಿರ್ಪೆ ವರಸಾ ।
ಕೇತಪುರಿಗಿರದೈದಿ ಭರತನಕೂಡಿ ನೀಂ ಬದುಕಂ ॥೯॥

ಮುಳಿಸು ನಿನ್ನೊಳಗಿಲ್ಲ ಪೂರ್ವದೆ ।
ಗಳಿಸಿದುದನಿಂದುಣ್ಬೆನೆನಗಾ ।
ಗಳಲದಿರು ಶುಭಮುಕ್ಕೆ ಮಾರ್ಗದೊಳೆನಲು ರಾಘುವನು ॥
ಪಳಪಳನೆ ಕಂಬನಿಯ ಧಾರೆಗ ।
ಳೆಳೆಗೆ ಸುರಿಯಲು ಲಕ್ಷ್ಮಣನ ಮನ ।
ದೊಳಗೆ ಶೋಕಾನಳವು ಪೊಕ್ಕುದು ಸುಟ್ಟುದವಯುವವ ॥೧೦॥

ಮರೆದನಂಗವನೊಡನೆ ಕೆದರಿದ ।
ಕರಣವೊದಲಂತಾಗಲಂಜುತ ।
ಕರವ ಜೋಡಿಸಿ ಬಿನ್ನವಿಸಿದನು ಗದ್ಗದಸ್ವರದೆ ॥
ಒರೆಯಲೇನನು ದೇವ ಚಿತ್ತ ।
ಕ್ಕರಿಕೆಯಿಲ್ಲದುದುಂಟೆ ರಕ್ಕಸ ।
ನೊರಲಿದಾರ್ತಧ್ವನಿಯೆ ಕಾರಣವೆನ್ನ ಬರವಿಂಗೆ ॥೧೧॥

ಮೋಸವೀನುಡಿ ತಾಯೆ ಮಹಿಮಾ ।
ವಾಸರಾಮಂಗಿಲ್ಲಪಾಯವು ।
ಲೇಸ ಕಾಂಬಿರಿ ನಿಮಿಷ ಸೈರಿಪುದೆನುತ ನಾನುಸಿರೆ ॥
ಭೂಸುರಾಂಗಿಗೆ ನಿಮ್ಮೊಳಹ ವಿ ।
ಶ್ವಾಸವೇ ಗಾಢಾಂಧತೆಯನಿ ।
ತ್ತೀಸುಬೇಡಿದೊಡೈಸು ನಿಷ್ಫಲವೆನಿಸಿತೆಲ್ಲವನು ॥೧೨॥

ಪೋಗುಪೋಗೆಂದೆನ್ನನಟ್ಟುತ ।
ಮೇಗುಕೀಳಾವುದನು ನೋಡದೆ ।
ಬಾಗುಳದೆ ಹುಲುನರರಿಗೊಪ್ಪುವ ಕೀಳುನುಡಿಗಳಲಿ ॥
ಬೇಗುದಿಯನೆನಗಿತ್ತರದರಿಂ ।
ಬೇಗ ಬಂದೆನು ದೇವ ಕರುಣಾ ।
ಸಾಗರನೆ ಕೃಪೆದೋರಿ ಮನ್ನಿಪುದೆನ್ನ ನೀನೆನಲು ॥೧೩॥

ಮೀರಿ ತನ್ನಯ ನೇಮವನು ಕಾ ।
ಯ್ಪೇರಿ ಬಂದುದದೊಂದು ಮೋಣವಿ ।
ಚಾರೆಯೆನಿಪಾ ಮಾನಿನಿಯು ಮಾತಿಂಗೆ ಮತಿಗೆಟ್ಟು ॥
ಕ್ರೂರದಾನವರಿರ್ಪಕಾಡೊಳ ।
ಗಾರುಸಾಹಾಯಕರುಮಿಲ್ಲದ ।
ನಾರಿಯೊಬ್ಬಳ ಬಿಟ್ಟು ಬಂದಾ ತಪ್ಪುತಾನೊಂದು ॥೧೪॥

ಇಂತು ನೀನಪರಾಧವೆರಡಂ ।
ಭ್ರಾಂತಿಯಿಂದಲಿ ಗೈದೆ ನಿನ್ನನೆ ।
ಸಂತತವು ನಂಬಿರ್ದನವ್ಮೊಳಗಿಂತದೇಕಾದೆ ॥
ಚಿಂತೆಯೊಂದಿರೆ ದೇವಿಯಾಕೆಯು ।
ಸಂತವಿಸುತಲ್ಲಿಪ್ಪುದನು ಬಿಸು ।
ಟೆಂತುಟಾದೊಡವಾಗಲೆಂದುಳಿದಕಟ ಬರಬಹುದೇ ॥೧೫॥

ಎಂದು ದುಃಖಿಸುತಾಡಿದಣ್ಣನಿ ।
ಗೆಂದನಾ ಸೌಮಿತ್ರಿ ಲಾಲಿಪು ।
ದಿಂದುವದನೆಯ ನಿಷ್ಠುರೋಕ್ತಿಯ ಕೇಳ ಜೀವಿಪರೆ ॥
ಇಂದು ಮತ್ಪ್ರಿಯನಳಿದೊಡೆನ್ನನು ।
ಹೊಂದು ವಿಚ್ಛೆಯೊಳಗಲದಿರ್ಪೆಯ ।
ಕೊಂದುಕೊಂಡಪೆನಲ್ಲದುಳಿಯೆನೆನುತ್ತ ವಾಚಿಸಲು ॥೧೬॥

ಒಡೆದುದೆನ್ನೆದೆ ಬಳಿಕ ಬೇಡಿದೆ ।
ನೊಡತಿ ಮನ್ನಿಪುದೆನುತಮಲ್ಲಿಂ ।
ದುಡುಕಿನಿಂದೈತಂದೆ ನಾಂ ಭವದೀಯಸನ್ನಿಧಿಗೆ ॥
ತಡೆಯಲಸದಳವಾದ ನುಡಿಗೇ ।
ಳ್ದೆಡೆಯೊಳಂತಿಹುದಣ್ಣದೇವನೆ ।
ನುಡಿಯಲಂಜುವೆನೆನ್ನ ದೋಷವ ಮರೆದು ನೀಂ ಸಲಹು ॥೧೭॥

ಎನುತೆಯಾಡಿದ ಲಕ್ಷ್ಮಣನ ನುಡಿ
ಗಿನಕುಲಾಧಿಪನಿರದೆ ಮನ್ನಿಸಿ ।
ವನದೆ ನಡೆದನು ವಾಯುವೇಗದೊಳೆಲೆವನೆಯ ಕಡೆಗೆ ॥
ಜನಕಜೆಯ ಬಾಗಿಲೊಳು ಕಾಣದೆ ।
ಮನಕೆ ಸಂಶಯುವಾಗಲೊಡನೆಯೆ ।
ಘನವಿಷಾದವನಾಂತು ನಿಲಯುವ ಪುಗುತ ಹುಡುಕಿದನು ॥೧೮॥

ಕಾಣಲಿಲ್ಲವು ತನ್ನಸತಿ ಬಳಿ ।
ಕಾಣೆಯಿಕ್ಕುತ ಕೂಗಿದನು ಮ ।
ತ್ಪ್ರಾಣವಲ್ಲಭೆ ಮಾತನಾಡೆಯುದೇತಕೆಲ್ಲಿರುವೆ ॥
ಕೇಣವನು ಬಿಡು ಹುಲ್ಲೆಯಿದೆಕೊ ।
ಳ್ಳೇಣಲೋಚನೆ ಬೇಗ ಬಾ ನಿ ।
ನ್ನಾಣತಿಯ ಮೀರುವನೆ ರಾಮನಿದೇಕೆ ತಡಗೈವೆ ॥೧೯॥

ಅಸುರರಂಜಿಕೆಗವಿತುಕೊಂಡೆಯೊ ।
ಅಸುರಮರ್ದನನಿದೆಕೊ ಬಂದಿಹೆ ।
ನೊಸಗೆಯುಲ್ಲವೆ ಸತಿಯುರಗ್ರಣಿಗಿನಿಯುನಾಗಮನ ॥
ಬಸಿದು ಬೀಳುವ ನಿನ್ನ ಮಮತಾ ॥
ರಸವದೋಪನೊಳಂಗಿಪೋದುದೆ ।
ಬಸಿರಶಿಖಿ ಬಲುಹಾಯ್ತು ತೋರಿಸು ಮೊಗವ ಶಶಿವದನೆ ॥೨೦॥

ಸುತ್ತಿ ಕೂಗಿದುದಾಯ್ತು ವನೆಯೊಳ ।
ಗೆತ್ತಲುಂ ಜಾನಕಿಯ ಸುಳಿವಿ ।
ಲ್ಲೆತ್ತ ಪೋದಳೊ ಕಾಣಲೊಲ್ಲಳು ಚಿತ್ತವಲ್ಲಭೆಯು ॥
ಚಿತ್ತದಾಸರ ಕಳೆಯಲುಪವನ ।
ದತ್ತಲೈದಿರಬೇಕು ಲಕ್ಷ್ಮಣ ।
ಮತ್ತಕಾಶಿನಿಯಿಪ್ಪೆಡೆಯ ನೀಂ ಗೊತ್ತುಗೈಯೆಸಲು ॥೨೧॥

ತಾನು ಗೈದವಿವೇಕದಿಂದೀ ।
ಹಾನಿಯಣ್ಣಂಗಾಯ್ತು ಶಿವಶಿವ ।
ಹೀನಭಾಗ್ಯನು ಧರೆಯೊಳೆನಗೆ ಸಮಾನರಾರಿಹರು ॥
ಮಾನಿನಿಯ ಕುಶಲದೊಳೆ ಸಂಶಯ ।
ವೇನಮಾಡುವೆನಿನ್ನು ಮುಸುಕಿದ ।
ಕಾನನಂಗಳನೆಲ್ಲ ಶೋಧಿಪೆನೆನುತ ಲಕ್ಷ್ಮಣನು ॥೨೨॥

ಹೂವನಂಗಳೊಳರಸಿದನು ಗೋ ।
ದಾವರಿಯ ತಡಿಗಳಲಿ ಕೂಗಿದ ।
ನಾವನಜಕತಿಯೊಗೆದ ಸರಗಳನೆಲ್ಲ ಬಳಸಿದನು ॥
ಆವೆಡೆಯೊಳಂ ಕಾಣಳನ್ನೇ ।
ಗೈವೆನೆಂದೆಲೆವನೆಗೆ ಮರಳುತ ।
ದೇವ ಚಿತ್ತೈಸೆಲ್ಲಿಯುಂ ದೇವಿಯರ ಸುಳಿವಿಲ್ಲ ॥೨೩॥

ಎಂದು ನುಡಿಯಲ್ಕೇಳಿ ರಘುಪತಿ ।
ನೊಂದು ಹಮ್ಮೈಸಿದನು ಮನದೊಳ ।
ಗಿಂದುಮುಖಿ ನೀನಿಂತು ಮೋಸವಗೈವುದೇ ತನಗೆ ॥
ದಂದುಗಕ್ಕೆಡೆಗೈದು ನನ್ನನು ।
ಮಂದಭಾಗ್ಯನನೊರ್ವನನೆ ಬಿಡು ।
ತಿಂದು ನೀನಕಟೆತ್ತ ತೆರಳಿದೆ ಮುಂದೆ ಗತಿಯೇನು ॥ ೨೪ ॥

ಹಾ ತನೂದರಿ ಸೀತೆ ಭುವನ ।
ಖ್ಯಾತೆ ಜನಕಸುಜಾತೆ ಸುಗುಣೋ ।
ಪೇತೆ ಸಜ್ಜನಗೀತೆ ಮುನಿಸುಪ್ರೀತೆ ಘನದಯಿತೆ ॥
ಬೀತುದೆನ್ನಯ ಸಿರಿಯು ಭುವನ ।
ಖ್ಯಾತ ರಘುಕುಲಮುದ್ಧದಬುದಿಯೊ ।
ಳಾತುಕೊಂಡೆನಕೀರ್ತಿಯನು ತಾನೆನುತ ಹಲುಬಿದನು ॥ ೨೫ ॥

ನೋಡಿದನು ಲಕ್ಷ್ಮಣನು ರಾಮನ ।
ನಾಡಮನುಜರಿಗುಚಿತವೆನಿಸುವ ।
ಗಾಢತರದಾಲಾಪಗಳ ನಿವನಡಗಿಸುವೆನೆನುತ ॥
ಬೇಡಿದನು ಕೈಮುಗಿದು ನಿನಗೀ ।
ಪಾಡು ತಕ್ಕುದೆ ದೇವ ದೇವಿಯು ।
ನಾಡೆ ಪುಡುಕುವವೇಳು ಸನಿಹದ ಗಿರಿಯು ಗುಹೆಗಳೊಳು ॥ ೨೬ ॥

ನರನು ನೀನಲ್ಲಸುರರಳಿವಿಗೆ ।
ಧರೆಯೊಳವತರಿಸಿರ್ಪ ಮಾಧವ ।
ನೊರೆಯುಲೇನವನಿಜೆಯು ಸಾಕ್ಷಾಲ್ಲಕ್ಷ್ಮಿಯೆಂಬುದನು ॥
ಅರಿಯದನೆ ನೀಂ ನಿನಗಿದೇಕೀ ।
ಪರಿಬವಣೆ ಚಿತ್ತದಲಿ ಸಾಕೀ ।
ಳರಸ ದೇವಿಯನರಸಲೆಂದಲ್ಲಿಂದ ಪೊರಮಡಿಸೆ ॥೨೭॥

ದಾರಿಯುಲ್ಲದದಾರಿಗೈದುತ ।
ಚೀರಿಯುಂದದಿ ಚೀರಿ ಮತ್ಸಖಿ ।
ಬಾರ ಜಾನಕಿ ಹೃದಯನಾಯಿಕೆ ಬಾ ಸರೋಜಮುಖಿ ॥
ಧೀರೆ ಗುಣಮಣಿಹಾರೆ ರತ್ಯಾ ।
ಕಾರೆ ದುರಿತವಿದೂರೆ ರಾಮನ ।
ನೀರೆ ನೀನಿಂದೆತ್ತಲೈದಿದೆ ಮೊಗವ ತೋರೆನುತ ॥೨೮॥

ದಿಕ್ಕುತೋರದೆ ಕಣ್ಗಳೊಳು ನೀ ।
ರುಕ್ಕಿಬರೆ ರೋದನವನೆಸಗುತ ।
ಲಕ್ಕಜದ ನರರೂಪದಾಹರಿ ಹರವಸದೆ ಸೊರಗಿ ॥
ಪಕ್ಕಿಗಳ ಕೈವೀಸಿ ಕರೆಯುತ ।
ಸೊಕ್ಕುಜೌವನೆ ತನ್ನ ಮಡದಿಯ ।
ನಕ್ಕಟಾ ನೀಂಕಾಣಿರೇ ಎಂದೊಲಿದು ಬೆಸಗೊಂಡ ॥೨೯॥

ಹರಿಣಗಳ ಕೇಳಿದನು ತನ್ನಯ ।
ಹರಿಣಲೋಚನೆಯೆತ್ತಲೆನ್ನುತ ।
ಕರಿಣಿಗಳ ಕಂಡರ್ಥಿಸಿದನಾಕರಿಗಮನೆಯಿರವ ॥
ಧರಣಿಯನು ಬೇಡಿದನು ತನಗಾ ।
ಧರಣಿಜೆಯ ತೋರೆನುತ ತಾಪಸಿ ।
ಯರನು ಕೇಳಿದನಾ ತಪಸ್ವಿನಿ ಯಿರ್ಪಳೆಲ್ಲೆನುತ ॥೩೦॥

ಧೈರ್ಯಗೆಟ್ಟುದು ಮನವು ಮೊದಲಿನ ।
ಕಾರ್ಯವೆಲ್ಲಡಗಿತ್ತೊ ಶಿವಶಿವ ।
ಶೌರ್ಯವೆಲ್ಲವು ಸಡಿಲಿತುತ್ಸವವೆಲ್ಲಮಿಂಗಿದುದು ॥
ಸ್ಥೈರ್ಯಭುಜಬಲದರ್ಪಗಳು ನಿಜ ।
ಕಾರ್ಯಗಾಣದೆ ಬಣ್ಣಗೆಟ್ಟುವು ।
ಸೂರ್ಯವಂಶದ ನೃಪತಿಗರಸಿಯುನಗಲಿದುದರಿಂದ ॥೩೧॥

ದೇವರಾಮಂಗಾಗಚೆಷ್ಟ್ರಾ ।
ಭಾವದಿಂ ಜಾನಕಿಯ ಮಾರ್ಗವ ।
ನಾವನಂಗಳ ಮೃಗಗಳೆಲ್ಲವು ತೋರಿಸುವುವೆನಲು ॥
ಮೋವನುಳಿಯುತ ಮುಂದೆ ನೆಗೆಯುತ ।
ತಾವು ತೆಂಕಣದಿಕ್ಕಿಗೋಡಿದು ।
ವೀವಿಶೇಷವ ಕಂಡು ರಘುವರರತ್ತ ನಡೆಯುತ್ತ ॥೩೨॥

ಕಂಡರೊಂದೆಡೆಯಲ್ಲಿ ಹೂವಿನ ।
ದಂಡೆಯಿಂದುದಿರಿರ್ದಪುಷ್ಪವ ।
ಖಂಡಿತದಿ ಜಾನಕಿಯ ಮಂಡೆಯೊಳಿರ್ದುದಹುದೆನುತ ।
ಕೊಂಡು ರಾಘವನದನು ಚುಂಬಿಸಿ ।
ಪುಂಡರೀಕಾಂಬಕೆಯ ನಿಜದಿಂ ।
ಕಂಡನೋ ಎನೆ ಹರಿಸಗಡಲೊಳು ಮುಳುಗಿ ಮೈಮರೆದು॥ ೩೩॥

ಮತ್ತೆ ಚೇತರಿಸುತ್ತಲಿದಕೆ ನಿ ।
ಮಿತ್ತವೇನುಂಟಾಯ್ತು ತನ್ನಯ ।
ಮತ್ತಕಾಶಿನಿ ಮುಡಿದ ಸುಮವಿಂತೇಕೆ ಕೆದರಿದುದು ।
ಉತ್ತಮಾಂಗದ ಮುಡಿಗದಾವನೊ ।
ಮಿತ್ತುರೂಹಿನದಾನವನು ಹಾ ।
ಯ್ದೆತ್ತಿಕೊಂಡರಸಿಯನು ಪೋಗಿರವೇಳ್ಕುಮೆಂದೆನುತೆ ॥ ೩೪॥

ಸುತ್ತಮುತ್ತಲು ನೋಡಿ ಹೇಸರ ।
ಗತ್ತೆಗಳು ಸತ್ತಿಹುದ ಕಂಡವ ।
ರೊತ್ತಿನಲಿ ಮುರಿದಿಳೆಯೊಳುರುಳದ ರಥವದೊಂದಿರಲು ।
ಚಿತ್ತವಿಭ್ರಮವಾಂತು ಮುಂದೈ ।
ದುತ್ತ ತನ್ನಯ ನಾಮವನು ಜಪಿ ।
ಸುತ್ತ ಕೆಡೆದಿರ್ಪ ಜಟಾಯುವನಾಗ ನೋಡಿದನು ॥ ೩೫॥

ಪರಿದರೆಕ್ಕೆಯ ಸುರಿವರಕುತದ |
ಗೊರಗೊರೆಂಬುತ್ಕ್ರಮಣನಿನದದ |
ಕೊರಗಣೆಯ ಖಗಪತಿಯ ಮುಖದಿಂದರಿಯುತೆಲ್ಲವನು ||
ದುರುಳರಾವಣನಿಂದ ತನ್ನಯ |
ಹರಿಬಕೋಸುಗ ಕೆಡೆದನೆನ್ನುತ |
ಮರುಗಿದನು ಸಂಸ್ಕರಿಸಿದನು ಮಡಿದಾ ಜಟಾಯುವನು ||೩೬||

ಪರರಿಗುಪಕಾರವನು ಮಾಳ್ಪವ |
ನಿರಿಸುವನೆ ದೇಹಾಭಿಮಾನವ |
ನರರೆ ತಂದೆ ಜಟಾಯು ತನಗಾಗಸುವನೀಗಿದೆಯ ||
ಪರಮಪುಣ್ಯಶ್ಲೋಕ ನೀನಾ |
ಪರಮಪದದೊಳ್ಸುಖದೆ ಬಾಳೆನು |
ತರಸ ನುದಕಾಂಜಲಿಯ ನೀಯುತೆ ಮುಂದೆ ತೆರಳಿದನು ||೩೭||

ಬಿಡದೆ ತೆಂಕಣದೆಸೆಗೆ ನಡೆಯುತ |
ಮೊಡಬಲಂಗಳೊಳರ್ಪ ಗಿರಿಗಳ |
ಸಡರಿ ನೋಡುತ ವನವ ಸೋದಿಸಿ ಗುಹೆಗಳನು ಪೃಗುತ ||
ತಡೆಯುದಲ್ಲಲ್ಲರಸಿ ಸೀತೆಯ |
ಕಡೆಗೆ ಕಾಣದೆ ದುಃಖಪರವಶ |
ರಡಿಗಡಿಗೆ ಹಮ್ಮೈಸಿ ಬೀಳುತಲೊಡನೆ ಯೇಳುತಲಿ ||೩೮||

ಇಂತು ಕಂಗೆಟ್ಟಡವಿಯಲಿ ಬಲು ।
ಚಿಂತೆಗಂಗವನಿತ್ತು ತೆರಳುತ ।
ಕಂತುಪೀಡಿತೆಯಾದಯೋಮುಖಿಯೆಂಬ ದನುಜೆಯನು ॥
ಪಿಂತೆ ತಾವಾ ಶೂರ್ಪಣಖೆಗಿರ ।
ದೆಂತು ಗೈದರೊ ತದ್ವಿಧಾನದ ।
ಸಂತವಣೆಗಿವಳರ್ಹೆಯೆನ್ನುತ ಭಂಗಿಸಿದರವಳ ॥೩೯॥

ದಾರಿಯೇ ನೆರೆಕಾಣಬಾರದ ।
ಘೋರಕಾನನದೊಳಗೆ ಬರುತಿರ ।
ಲಾರುಬಟೆಯೊಂದಾಗ ಕೇಳಿಸಿತತಿಭಯಂಕರದ ॥
ಭೂರಿಸೂಕರಹರಿಗಜಂಗಳು ।
ಜೇರಿಡುತ ದೆಸೆಗೆಟ್ಟು ಹಾರಿದು ।
ವೀರಭಸಕಿಂದೇನುಕಾರಣವರಿಯಬೇಕೆನುತ ॥೪೦॥

ಸುತ್ತಲೀಕ್ಷಿಸುತುಭಯದಿಶೆಯಿಂ ।
ದೊತ್ತಿ ಬರ್ಪುವು ಗಿರಿಯಸೊಲ್ಗಳ ।
ವೆತ್ತಣದ್ಭುತ ಸಿಲುಕಿಸಿದುವಿಂದೆಮ್ಮನಿರುಬಿನಲಿ ॥
ನಿತ್ತರಿಪಹದನಾವುದೆನ್ನುತ ।
ಚಿತ್ತದಲಿ ಸಂಭ್ರಾಂತರಾಗುತ ।
ಮತ್ತೆ ನೋಡುತ್ತಿರಿದರಸುರನ ತೋಳ್ಗಳೆಂದೆನುತ ॥೪೧॥

ಸಿರವದಿರ್ದುದು ಬಸಿರಮಧ್ಯದೆ ।
ಚರಣವಿಲ್ಲದ ಬರಿಯ ಮುಂಡವು ।
ಕರಗಳವು ತಾವೆರಡುಯೋಜನದುದ್ದವಳತೆಯಲಿ ॥
ಉರಿವನೇತ್ರವದೊಂದು ಪಣೆಯೊಳ ।
ಗಿರಲು ಪಸರಿಸಿದುಭಯಕರಗಳ ।
ಸೆರೆಗೆ ಸಿಕ್ಕಿದವನಮೃಗಂಗಳ ತಿಂದು ತೇಗುತಲಿ ॥೪೧॥

ಅದುಭುತಾಕಾರದಲಿ ಗಿರಿಯವೊ ।
ಲಿದಿರೊಳಿರುವನ ಕಂಡಿದೇನಿಂ ।
ದಿದಕುಪಾಯವು ಕೊಂದೊಡಲ್ಲದೆ ಬಾಳ್ವೆತವಗಿಲ್ಲ ॥
ಸದೆದು ಕಳೆ ನೀನೊಂದುಬಾಹುವ ।
ನಿದೆಕೊ ನಾಂ ಮತ್ತೊಂದ ಕಡಿವೆನು
ಬೆದರಲಾಗದೆನುತ್ತ ರಾಘುವನೊರೆದನನುಜಂಗೆ ॥೪೨॥

ಭರದೊಳಾಗಳೆ ವೀರರಿರ್ವರು ।
ಶರಗಳಿಂದವನೆರಡುತೋಳ್ಗಳ ।
ನರಿಯಲಾತಂಗರಿವು ಬಂದುದು ಕಂಡನಾಹರಿಯ ॥
ಗುರುವೆ ತವದರ್ಶನದೊಳೆನ್ನಯ ।
ದುರಿತರಾಶಿಯು ಕರಗಿ ಪೋದ ।
ತ್ತರರೆದಾನವಜನ್ಮದುಃಖವುಕಳೆದುದಿಂದಿನಲಿ ॥೪೪॥

ಅರಿಯಲಾನು ಕಬಂಧನೆಂಬವ |
ನಿರವು ತನಗೀವಿಪಿನಮಧ್ಯದೆ |
ದೊರೆದುದೀದನುಜತ್ವವೊರ್ವ ತಪೋಧನನುಶಪಿಸೆ ॥
ಪರಿಹೃತಿಯ ಯಾಚಿಸಲು ಲಕ್ಷ್ಮೀ |
ವರನು ನರನಾಗುದಿಸಿ ನಿನ್ನೀ |
ಕರವನರಿಯೆ ವಿಶಾಪವಹುದೆನುತವನು ಬೆಸಸಿದನು ॥೪೫॥

ಎಂದಿಗಪ್ಪುದೊ ನಿನ್ನ ಪದಗಳ |
ಸಂದರುಶನದ ಭಾಗ್ಯವೆಂದರ |
ವಿಂದನಾಭನೆ ಸಮಯವೀಕ್ಷಿಸುತಿಂದು ಧನ್ಯತೆಯ ॥
ಹೊಂದಿದೆನು ನಿನ್ನಯ ಕರಂಗಳ |
ನಿಂಧನವನುರಿಗೊಳಿಸಿ ಪಾಪಿಕ |
ಬಂಧದೇಹವ ದಹಿಸಿದೊಡೆ ಲೇಸಹದು ನಿನಗೆನಲು ॥೪೬॥

ಒಡನೆ ಸಹಭವರಿಂಧನಂಗಳ |
ಕಡಿದು ಜೋಡಿಸುತಸುರದೇಹವ |
ನಿಡುತವಗ್ನಿಯೊಳುರಿಸಲದರಿಂದೆಳ್ದು ಗಗನದಲಿ ॥
ಕಡುಚೆಲುವ ಗಂಧರ್ವನೊಪ್ಪುತ |
ನುಡಿಸಿದನು ಸಿರಿಯೆರೆಯ ನಿನ್ನಯ |
ಮಡದಿವಾಣಿಯನು ಕಾಂಬುಪಾಯವ ಪೇಳ್ವೆನವಧರಿಸು ॥೪೭॥

ಅರಸರಿಗೆ ಷಡ್ಗುಣಗಳೇ ತಾ ।
ವರಿಯೆ ಕಾರ್ಯಕೆ ಸಾಧನಂಗಳು ।
ಪಿರಿಯಕಷ್ಟದೊಳೊದವಿದಾತನೆ ತಿಳಿಯಲುಪಕಾರಿ ॥
ನಿರುತ ನಿನ್ನಾಪತ್ತಿಗೆಣೆಯಾ ।
ದುರುವಿಪತ್ತನು ಹೊಂದಿ ಕೊರಗುವ ।
ಖರಕರಾತ್ಮಜನೆನಿಪ ಸುಗ್ರೀವಾಖ್ಯ ಕಪಿವರನು ॥೪೮॥

ವರಪರಾಕ್ರಮಿಯೆನಿಸಿ ಸೊಕ್ಕಿದ ।
ಹಿರಿಯಸೋದರನಪ್ಪ ವಾಲಿಯು ।
ಕರದೊಳಪಜಯವೊಂದಿ ನಾಲ್ವರು ಮಂತ್ರಿವರರೊಡನೆ ॥
ಇರುವನಾವರಋಶ್ಯಮೂಕದ ।
ಗಿರಿಯೊಳವನನು ಸೇರಿ ಸಖ್ಯವ ।
ನುರುವಿವೇಕದೆ ಬೆಳಸಲಪ್ಪುದು ಕಾರ್ಯವತಿಜವದೆ ॥೪೯॥

ಕಲಹವಾಗಲು ಸೋದರನ ನಿಜ ।
ಲಲನೆ ರುಮೆಯೆಂಬಳನು ಬಲುಹಿಂ ।
ದಲಘುಭುಜಬಲನಿಂದ್ರತನುಜನು ವಾಲಿಯಪಹರಿಸಿ ॥
ನಿಲಯದಿಂ ಪೊರಮಡಿಸಿ ತಮ್ಮನ ।
ನೆಳಲ ಸೈಸದೆ ಕಾಡಿಗಟ್ಟ ।
ಲ್ಕಳೆಯುತಿರ್ಪನು ಸತಿಯ ವಿರಹದೊಳವನು ಕಂಗೆಡುತ ॥೫೦॥

ದೊರೆವುದಾತನ ಮೈತ್ರಿ ದಿಟದಲಿ ।
ತೆರಳು ಪಶ್ಚಿಮದಿಕ್ಕಿಗೀಗಳೆ ।
ಮೆರೆವ ಪಂಪಾಸರದ ತೀರದ ಪುಣ್ಯವನಗಳಲಿ ॥
ಪರಿಪರಿಯು ಫಲಪುಷ್ಪವಿರ್ಪುವು ।
ಹರಿಣನೆಕ್ಕಲನಾದಿಯಿಹ ಮಿಗಗಳು ।
ಮಿರುವುವಲ್ಲಿಗೆ ಕೆಲವುಕಾಲವ ಕಳೆಯಲನುಕೂಲ ॥೫೧॥

ಅದರಪಡುವಣ ತಡಿಯ ಸೇರಲು ।
ಸದಮಲಾಶ್ರಮವೊಂದು ಮನಕುರೆ ।
ಮುದವ ಬೀರುತ ಗೋಚರಿಪುದಲ್ಲೊರ್ವ ತಾಪಸಿಯು ॥
ಪದುಮನಾಭನೆ ಶಬರಿಯೆಂಬವ ।
ಳದಿರುನೋಡುತ ನಿನ್ನ ಚರಣವ ।
ಪದುಳದಿಂ ಸೇವಿಸುವುದಕೆ ಕಾದಿಹಳು ಪೋಗಲ್ಲಿ ॥೫೨॥

ಎನುತ ನುಡಿಯುವ ವರಕಬಂಧನ ।
ವಿನಯದುಕ್ತಿಗೆ ಮೆಚ್ಚಿ ರಾಮನು ।
ಘನಮಹಿಮ ನೀನಿನ್ನು ನಿನ್ನಯ ಲೋಕಕೈದೆನುತ ॥
ಅನುಜನೊಡನಲ್ಲಿಂದ ಪೊರಮ ।
ಟ್ಟನು ನಯಾನ್ವಿತೆಯಾದ ಶಬರಿಯ ।
ವಿನುತಮಾದಾಶ್ರಮವ ನರಸುತಮಲ್ಲಿಗೈತಂದ ॥೫೩॥

ಸಡಗರದೊಳಾಮುನಿವಿರಕ್ತೆಯು ।
ಮುಡಿಯುಚಾಚುತೆ ರಾಮನಂಘ್ರಿಗೆ ।
ಕಡುದರಿದ್ರಗೆ ನಿಧಿಯುದೊರೆದಂತಾಗಳೊಲವಿನಲಿ ॥
ತಡೆಯುದರ್ಘ್ಯಾದಿಗಳನೀಯುತ ।
ಲಡಿಗಡಿಗೆ ಕೀರ್ತಿಸುತೆ ಕುಣಿಯುತ ।
ಲೊಡನೆ ಫಲಮೂಲಾದಿಗಳ ನಿತ್ತಾಗಳುಪಚರಿಸೆ ॥೫೪॥

ರಾಮನಾತಿಥ್ಯವನು ಕೈಕೊಂ ।
ಡಾಮಹಾವ್ರತೆಗಿರ್ಪ ಭಕ್ತಿಗ ।
ಮಾಮಹಿತ ವೈರಾಗ್ಯಕಂ ಮಚ್ಚುತ್ತ ತಲೆದೂಗಿ ॥
ನೇಮವಿತ್ತನು ನಿನಗೆ ನೀನಿ ।
ನ್ನಾಮಹೇಂದ್ರನ ಲೋಕವನು ಮೇಣ್ ।
ಕಾಮಿಸುವ ಲೋಕಾಂತರವನಿರದೊಂದಿ ಸುಖದೊಳಿರು ॥೫೫॥

ಎಂದು ನುಡಿಯಲ್ಕೊಡನೆ ವೃದ್ಧೆಯು ।
ವಂದಿಸುತ ರಘುವರನ ಪದಗಳ ।
ಗಂದು ಯಜ್ಞೇಶ್ವರನಿಗಾಹುತಿಯಿತ್ತು ನಿಜತನುವ ॥
ಹಿಂದೆ ತನ್ನಯ ಗುರುಮತಂಗನು ।
ಹೊಂದಿದಾವರಪುಣ್ಯಲೋಕಕೆ ।
ಸಂದು ಸುರುಚಿರಸುಖದೊಳೆಸೆದಳು ಶಬರಿ ಗುಣಲಹರಿ ॥೫೬॥

ಬಳಿಕಲಾ ಮಾತಂಗವನವನು ।
ಕಳೆದು ಮುಂದಿಹ ಗಿರಿಯ ಕಾಣುತ ।
ವಲಿಮುಖೇಂದ್ರನ ಕಾಣುವೆವು ತಾವೆಂಬ ಸಡಗರದೆ ॥
ಲಲಿತಹರ್ಷವನಾಂತು ಭಾಸ್ಕರ ।
ಕುಲಜರೈದುತ ಕೆಲದೊಳೆಸೆವಾ ।
ತಿಲಕಪಾಟಲಿ ಪನಸನಾರಂಗಾದಿ ತರುಗಳೊಳು ॥೫೭॥

ನೆರೆದು ಕುಳಿತಿಹ ಶುಕಪಿಕಂಗಳ ।
ನೆರವಿಯಿಂದೈತರ್ಪ ಮೃದುಲ ।
ಸ್ವರವನಾಲಿಸುತತಿಮನೋಹರವಾಗಿ ರಂಜಿಸುವ ॥
ಗೊರಟೆ ಸಂಪಗೆಯಾದಿ ಯಾದಾ ।
ತರುಗಳಿಗೆ ಪಬ್ಬಿರ್ಪವನಲತೆ ।
ಭರದೆ ಕುಸುಮಿತವಾಗಿ ಮೊರೆದಿರಲದರ ಮಧ್ಯದಲಿ ॥೫೮॥

ವನಸುಮಂಗಳಮೇಲೆ ಬೀಸು ।
ತ್ತನಿಲನುರೆ ತನಿಗಂಪನಾನುತ ।
ತನುವಿಗಾಪ್ಯಾಯನವ ಮಾಳ್ಪುದ ಕಂಡು ರಘುವರರು ॥
ವಿನುತಚೈತ್ರನ ಮಹಿಮೆಗಿರದುರೆ ।
ಮನದೊಳಾನಂದಿಸುತ ಕಪಿಕುಲ ।
ವನಧಿಚಂದ್ರನ ಕಾಂಬ ತವಕದೊಳೈದಿದರು ಮುಂದೆ ॥೫೯॥

ಕಾಂಡಂ ಸಂಪೂರ್ಣಂ.